Mr. SPEAKER.—The question is :

"That the Mysore Agricultural Income-Tax (Amendment) Bill, 1963, as amended, be passed."

The motion was adopted.

THE MYSORE PRISONS BILL, 1962.

Sri B. D. JATTI.—Sir, I beg to move :

"That the Mysore Prisons Bill, 1962, be taken into consideration."

Mr. SPEAKER.—Motion moved.

"That the Mysore Prisions Bill, 1962, be taken into consideration."

Sri B. D. JATTI.—Sir, it is not necessary for me to explain at length about the provisions of the Prisons Bill. In our State there are three Acts in force. The first is the Act of 1894 in force in Bombay area and Coorg and Madras, 1954 Act of Hyderabad in force in Hyderabad area and Mysore Prisons Act of 1943 in force in old Mysore area. In order to have a uniform legislation, we have brought this Bill before this House. I hope, Hon'ble Members, without much discussion, would pass this measure. This is not the first time that this Bill was introduced. It was introduced in 1959 and 1961. It could not be taken up then and therefore we have now come before the House.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಗಳೇ, ಮಾನ್ಯ ಗೃಹ ಮಂತ್ರಿಗಳು ಬಂದೀ ಖಾನೆಗಳಿಗೆ ಸಂಬಂಧಪಟ್ಟಂತೆ ಒಬಿರಾಯನ ಕಾಲದ ಮಸೂದೆಯೊಂದನ್ನು ತಂದು ಏಕರೂಪತೆಯನ್ನು ಸಾಧನೆ ಮಾಡುವುದಕ್ಕೋಸ್ಕರ ಮದ್ರಾಸ್ ಪ್ಯಾಟರನ್, ಹೈದರಾಬಾದ್ ಪ್ಯಾಟರನ್ ಮತ್ತು ಇನ್ನು ಅನೇಕ ಪ್ರದೇಶಗಳ ಆಕ್ಟುಗಳನ್ನು ಸೇರಿಸಿದ್ದೇವೆ. ಇದರಲ್ಲಿ ಅಂತ ಹೇಳಿದರು 1963ನೇ ಇಸವಿಗೆ ಸಂಬಂಧಪಟ್ಟಂತೆ ನವಸಮಾಜಕ್ಕೆ ಹೊಂದಿಕೊಳ್ಳುವಂಥ ರೀತಿಯಲ್ಲಿ, ಬಂದಿಖಾನೆಗಳನ್ನು ಸುಧಾರಣೆ ಮಾಡತಕ್ಕಂತೆ, ಈ ಒಂದು ಕಾನೂನನ್ನು ಅಳವಡಿಸಿ ಈ ಸಭೆಯ ಮುಂದೆ ಇಡುತ್ತಾರೆಂದು ನಾನು ಆಶೆ ಇಟ್ಟು ಕೊಂಡಿದ್ದೆ. ಆ ಆಸೆ ನಿರಾಸೆಯಾಯಿತು. ಈ ಸರ್ಕಾರ ಇದ್ದು ಕೂಡ ಪಾಶ್ಚಿಮಾತ್ಯ ಯುಗದಲ್ಲಿದ್ದಂಥ ಕಾನೂನನ್ನು ನವಸಮಾಜದಲ್ಲಿ ತಂದಿರತಕ್ಕದ್ದು ನಿರಾಶಾದಾಯಕವಾದುದು, ವಿಷಾದಕರವಾದ ಸಂಗತಿ ಎಂದು ನಾನು ಈ ಸಭೆಯಲ್ಲಿ ಹೇಳಬೇಕಾಗಿದೆ. ಸಮಾಜದಲ್ಲಿ ಯಾರೇ ಆಗಲಿ ಅಪ್ಪು ಮಾಡುವವರನ್ನು ತೆಗೆದು ಕೊಂಡು ಹೋಗಿ ಶಿಕ್ಷೆ ಕೊಡತಕ್ಕ ಪದ್ಧತಿ ಬಹಳ ಕಾಲದಿಂದಲೂ ಬಂದಿದೆ. ಆ ಹಳೆಯ ಪದ್ಧತಿಯ ಪ್ರಕಾರ ಸಮಾಜದಲ್ಲಿ ಯಾರಾದರೂ ತಪ್ಪುಮಾಡಿ ಶಿಕ್ಷಿತರಾದರೆ ಅವರನ್ನು ಬಂದೀಖಾನೆಗೆ ಕಳಿಸಿ ಅವರು ಪುನಃ ಸಮಾಜಕ್ಕೆ ದೂರೀಕೃತರಾಗಿರಬೇಕು. ಸಮಾಜದಿಂದ ಅವರನ್ನು ಬೇರ್ಪಾಡು ಮಾಡಬೇಕು ಎಂದು ಒಂದು ಕಾಲದಲ್ಲಿತ್ತು. ಇವತ್ತಿನ ದಿವಸ ಈ ಬಂದೀಖಾನೆಗಳು ಪರಿವರ್ತನೆಯಾಗಬೇಕು ಎಂದು ವಿಮರ್ಶೆ ಮಾಡುವ ಕಾಲ ಬಂದಿದೆ. ಇವತ್ತು ನಮ್ಮ ಸಮಾಜದಲ್ಲಿ, ನಮ್ಮ ಜೊತೆಯಲ್ಲಿಯೇ ನಮ್ಮ ಅಕ್ಕಪಕ್ಕದಲ್ಲಿರುವ ಮನುಷ್ಯ ಒಳ್ಳೆಯವನಿರಬಹುದು. ಅದೇ ಮನುಷ್ಯ ನಾಳೆಯ ದಿವಸ ಯಾವುದೋ ಒಂದು ಪೊಕದ್ದಮೆಯಲ್ಲಿ ಸಿಕ್ಕಿ ಶಿಕ್ಷಿತನಾಗಿ ಜೈಲಿಗೆ ಹೋಗತಕ್ಕ ಸಂದರ್ಭ ಬರಬಹುದು. ಹಾಗಾದ ಮಾತ್ರಕ್ಕೆ ಅವನು ಪೂರ್ತಿ ಕೆಟ್ಟವನು ಎನ್ನುವ ಭಾವನೆ ಹೋಗಬೇಕು. ದೊಡ್ಡ ದೊಡ್ಡ ಮೇಧಾವಿಗಳು ಚರ್ಚೆ ಮಾಡಿ ಜೈಲಿನ ಸುಧಾರಣೆ ಎಲ್ಲುವರೆಗೆ ಆಗಬೇಕೆಂದು ಹೇಳಿದ್ದಾರೆಂದರೆ, ಖೈದಿಗಳನ್ನು ಜೈಲಿನಲ್ಲಿ ಗೋಡೆಗಳ ಮಧ್ಯೆ ಕೂಡಿಹಾಕದೆ open spaceನಲ್ಲಿಟ್ಟು ಅವರು ತಮ್ಮ ದಿನಚರಿಯಲ್ಲಿ ಸಮಾಜವನ್ನು

(ಶ್ರೀ ಎಸ್. ಶಿವಪ್ಪ)

ನೋಡುತ್ತಾ ವಾರ್ಡಾಡು ಹೊಂದುವಂತೆ ಏರ್ಪಾಡು ಮಾಡಬೇಕು ಎನ್ನುವಷ್ಟು ದೂರ ಹೋಗಿದ್ದಾರೆ. ಅಂಥ ವಿಷಯಗಳನ್ನು ಯಾವುದನ್ನು ಕೂಡ ನಾವು ಈ ಮಸೂದೆಯಲ್ಲಿ ಕಾಣದೆ ಇದ್ದೇವೆ. ಹಳೆಯ ಕಾನೂನುಗಳೇನಿವೆಯೋ ಅವನ್ನೆಲ್ಲ ಒಂದುಗೂಡಿಸಿ ಇಲ್ಲಿ ತಂದಿದ್ದಾರೆ. ಇದರಿಂದ ಏನನ್ನು ಸಾಧನೆ ಮಾಡಬೇಕೆಂದು ಕಾನೂನು ಮಾಡುತ್ತಿದ್ದೇವೆಯೋ ಆ ಸಾಧನೆ ಖಂಡಿತವಾಗಿ ಆಗುವುದಿಲ್ಲ. ಇಂಥ ಒಂದು ಹೊಸ ಮಸೂದೆಯನ್ನು ಸಭೆಯಲ್ಲಿ ಇಡುವ ಕಾಲದಲ್ಲಾ ಏನಾದರೂ ಹೊಸ ವಿಷಯ ಗಳನ್ನು ಬಂದೀಖಾನೆ ಯಾವ ರೀತಿ ಇರಬೇಕು, ಎನ್ನುವ ವಿಷಯಗಳನ್ನೂ ಆದರಲ್ಲಿ ತಂದಿದ್ದರೆ ಬಹಳ ಚೆನ್ನಾಗಿತ್ತು.

ಶ್ರೀ ಬಿ. ಡಿ. ಜತ್ತಿ.—Definition ಓದಿದರೆ ಗೊತ್ತಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಈಗ ತಾನೆ ಮಾನ್ಯ ಸಚಿವರು ಹೇಳಿದರು, ಮೂರು ವರ್ಷ ಕಾಲ ಗೃಹ ಶಾಖೆ ಅವರಿಗೆ ಇದ್ದುದರಿಂದ ಬಂದೀಖಾನೆಗಳ ವಿಚಾರವಾಗಿ ಬಹಳ ಚೆನ್ನಾಗಿ ಗೊತ್ತಿದೆ ಎಂದು. ಇವತ್ತು ಅತ್ತಕಡೆ ಇರತಕ್ಕ ಜನ ಮತ್ತು ಈ ಕಡೆ ಕೆಲವರು ತುರಂಗವಾಸವನ್ನು ಅನುಭವಿಸಿದ್ದೇವೆ. ಅಲ್ಲಿಂದ ಹೊರ ಬಂದಮೇಲೆ ಬಂದೀಖಾನೆಗಳನ್ನು ಸುಧಾರಣೆ ಮಾಡಬೇಕು. ಜೈಲುವಾಸವನ್ನು ಸುಧಾರಣೆ ಮಾಡಬೇಕು ಎಂದು ಅನೇಕ ವೇದಿಕೆಗಳ ಮುಖಾಂತರ ಆಗಿನ ಪದ್ಧತಿಯನ್ನು ಖಂಡಿಸಿ ಮಾತನಾಡುತ್ತಿದ್ದಿರಿ, ಮುಂದೆ ತಾವು ಅಧಿಕಾರಕ್ಕೆ ಬಂದರೆ ಅಂಥದನ್ನೆಲ್ಲ ಸುಧಾರಿಸುವ ಭರವಸೆಗಳನ್ನು ಕೊಡುತ್ತಿದ್ದಿರಿ. ಆ ಭರವಸೆ ಏನಾಯಿತು? ಯಾವ ಕಡೆ ಹೋದರೂ ಕೂಡ ಇಂಗ್ಲೀಷರು ಆಳುತ್ತಿದ್ದ ಕಾಲದಲ್ಲಿ ಕಟ್ಟಿದಂಥ ಜೈಲುಗಳಿವೆಯೇಹೊರತು ಅವುಗಳಿಗೆ ಮಾಡಿದಂಥಯಾವ ಮಾರ್ಪಾಟೂ ಕೂಡ ನಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ. ತಾವು ಜೈಲುವಾಸವನ್ನನುಭವಿಸಿ, ಜೈಲಿನ ಸುಖವನ್ನು ನೋಡಿ ಬಂದಾಗ ರಾಜ್ಯ ನಮ್ಮ ಕೈಗೆ ಸಿಕ್ಕಿದರೆ ಜೈಲುಗಳ ಸುಧಾರಣೆ ಮಾಡಲೇಬೇಕು ಎಂದು ಹೇಳುತ್ತಿದ್ದಿರಿ.....

Mr. SPEAKER.—I will arrange for a visit to the Jail for some of the Hon'ble Members if they like, so that they can satisfy themselves.

ಶ್ರೀ ಎಸ್. ಶಿವಪ್ಪ.—ನನಗೆ ಕೂಡ ಇಂಥ ಅವಕಾಶವಿತ್ತು. 1957 ನೆಯ ಇಸವಿಯಲ್ಲಿ ಎರಡು ವಾರಗಳ ಕಾಲ ನಾನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿದ್ದೆ. 1942ನೆಯ ಇಸವಿಯಲ್ಲೂ ಕೂಡ ನನ್ನ ಅನೇಕ ಜನ ಹಿರಿಯರು ಜೈಲುವಾಸವನ್ನನುಭವಿಸಿದರು. ಆಗ ನಾನು ಓದುತ್ತಿದ್ದೆ. ಅವತ್ತಿನ detenues ಆಗಿ political prisoners ಆಗಿ ಇಂಗ್ಲೀಷರ ಕಾಲದಲ್ಲಿ ಇಟ್ಟಿದ್ದಾಗ ಏನು ಸೌಕರ್ಯಗಳನ್ನು ಕೊಡುತ್ತಿದ್ದರೋ ಆ ಸೌಕರ್ಯ ಕೂಡ ಇಲ್ಲದೆ ಇರತಕ್ಕ ಪರಿಸ್ಥಿತಿ ಇದೆ. ಅರ ಹೊಟ್ಟೆ, ಕಾಲು ಹೊಟ್ಟೆಗೆ ಆಗುವಷ್ಟು ಆಹಾರವನ್ನು ಕೊಡುತ್ತಿದ್ದರು. ನಾನು ಆಗ ಉಪವಾಸ ಕೂಡ ಮಾಡಬೇಕೆಂದಿದ್ದೆ. ಸೋಷಿಯಲ್ ಪಕ್ಷದವರು ನತ್ಯಾಗ್ರಹಮಾಡಿದಾಗ ನನ್ನನ್ನೂ ಮಾನ್ಯಸ್ನೇಹಿತರಾದ ಗೋಪಾಲ ಗೌಡರರನ್ನೂ ಬಂದೀಖಾನೆಯಲ್ಲಿಟ್ಟರು. ಅಲ್ಲಿ ಕೊಡತಕ್ಕ ಆಹಾರ, ವಸತಿ ಸೌಕರ್ಯ ಇವುಗಳನ್ನೆಲ್ಲ ನಾನು ಖುದ್ದಾಗಿ ನೋಡಿ ಬಂದಿದ್ದೇನೆ. 1942ರಲ್ಲಿ ಇಂಗ್ಲೀಷರ ಆಡಳಿತದಲ್ಲಿ ಜೈಲು ಕಾನೂನುಗಳನ್ನೇ ಎಳ್ಳಷ್ಟು ಬದಲಾಯಿಸದೆ ಇಟ್ಟು ಕೊಂಡಿದ್ದರೆಂದು ವಿಷಾದದಿಂದ ಹೇಳಬೇಕಾಗಿದೆ.

ಇವತ್ತಿನ ದಿವಸ ಬಂದೀಖಾನೆಗಳನ್ನ ತಾವು ಎಷ್ಟರ ಮಟ್ಟಿಗೆ ಸುಧಾರಣೆ ಮಾಡಬಹುದಾಗಿತ್ತೋ ಆ ಸುಧಾರಣೆ ಮಾಡುವುದರಲ್ಲಿ ಪೂರ್ಣವಾಗಿ ವಿಫಲಗೊಂಡಿದ್ದೀರಿ. ಇದರಲ್ಲಿ ತಾವು ಖೈದಿಗಳನ್ನು ವಿಂಗಡಣೆ ಮಾಡಿ ಹೇಳಿದ್ದೀರಿ. ಹಾಗೆ ಹೇಳುವಾಗ civil prisoner, criminal prisoner, convicted prisoner ಎಂದು ಮೂರು ತರಹ ಮಾಡಿದ್ದಿರಿ. Political prisoner ಎನ್ನುವುದಕ್ಕೆ ಅರ್ಥ ವಿವರಣೆಯನ್ನು ಸಹ ಕೊಟ್ಟಿಲ್ಲ. ಹಿಂದೆ ನಿವೇಲ್ಲ ಕಾಂಗ್ರೆಸ್ ಸಂಸ್ಥೆಯ ಹೆಸರಿನಲ್ಲಿ ಸ್ವಾತಂತ್ರ್ಯ ಸಂಗ್ರಾಮ ನಡೆಸಿದ್ದಾಗ, ಇಂಗ್ಲೀಷರು ಇದ್ದಾಗಲೂ ಕೂಡ ರಾಜಕೀಯ ಬಂದಿಗಳು ಎಂದು ಮಾಡಿದ್ದರು. ರಾಜಕೀಯ ಬಂದಿಗಳಾಗಿ ಹೋದರೆ ಅವರಿಗೆ ಕೆಲವು ಸೌಲಭ್ಯಗಳನ್ನು ಕೊಟ್ಟು ಅವರನ್ನು ಒಂದು ರೀತಿಯಲ್ಲಿ ನೋಡಿಕೊಳ್ಳುವ ಪದ್ಧತಿ ಇತ್ತು. ಇವತ್ತು ನಿಮ್ಮ ಪದ್ಧತಿಯಲ್ಲಿ political prisoner ಎನ್ನುವುದಕ್ಕೆ ಅವಕಾಶವೇ ಇಲ್ಲ. ನಮ್ಮ ಸರ್ಕಾರ ಮಾಡಿರತಕ್ಕದ್ದನ್ನು, ನಾನೇನಾದರೂ ಬಹಿರಂಗಸಭೆಯಲ್ಲಿ ಟೀಕಿಸಿದರೆ ನಮ್ಮ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕುತ್ತೀರಿ. I will be criminal prisoner. ಇದಕ್ಕೆ ಕಾರಣ ನಮ್ಮ ಕಾನೂನು.

Mr. SPEAKER.—Not when the Hon'ble Member is in Sessions I would not permit it.

ಶ್ರೀ ಎಸ್. ಶಿವಪ್ಪ.—ಇವತ್ತಿನ ದಿವಸ definitions ನಲ್ಲಿ ಕೂಡ political prisoners ಎನ್ನ ತಕ್ಕದ್ದನ್ನು ಸೇರಿಸಿಲ್ಲ. ರಾಜಕೀಯ ಖೈದಿಗಳನ್ನು ಏಕೆ ಬಿಟ್ಟುಬಿಟ್ಟಿದ್ದೀರಿ ಎಂದು ಪ್ರಶ್ನೆಮಾಡ ಬೇಕಾಗಿದೆ. ಇದರ ಒಳಗಿನ ಅರ್ಥವಿಷ್ಟೆ. ಯಾರಾದರೂ ರಾಜಕೀಯ ಚಳುವಳಿಯನ್ನು ನಡೆಸಿ ದರೆ ರಾಜಕೀಯ ಎನ್ನುವುದನ್ನು ತಪ್ಪಿಸಿ criminal list ನಲ್ಲಿ ಸೇರಿಸತಕ್ಕ ಒಂದು ಹೂಟ.....

Sri B. D. JATTI:—Sir, that is not correct. We don't put them under the category of criminal prisoners. They are respectable people. They cannot be categorised along with other criminals. They are people, who are trying for the good of the country.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಈ ಗೃಹ ಖಾತೆಯ ಚಾರ್ಜಿನಲ್ಲಿರತಕ್ಕ ಆರ್ಥಿಕ ಸಚಿವರು ಯಾವತ್ತಿಗಾದರೂ ರಾಜಕೀಯ ಕಾರಣಕ್ಕಾಗಿ ಜೈಲಿಗೆ ಹೋಗಿದ್ದರೇ ಎನ್ನುವ ನಮಾಚಾರ ಬೇಕಾಗಿತ್ತು.

ಶ್ರೀ ಬಿ. ಡಿ. ಜತ್ತಿ.—ಈಗ ಹೋಗಿಲ್ಲ.

ಶ್ರೀ ಎಸ್. ಶಿವಪ್ಪ.—ಆದುದರಿಂದ ತಾವು ದಯವಿಟ್ಟು ರಾಜಕೀಯ ಕಾರಣಕ್ಕಾಗಿ ಜೈಲಿಗೆ ಹೋಗತಕ್ಕವರಿಗೆ ಒಂದು ಕಲಮಿನಲ್ಲಿ ಪ್ರತ್ಯೇಕವಾಗಿ ಏರ್ಪಾಡುಮಾಡಿದರೆ ಬಹಳ ಅನುಕೂಲವಾಗು ತ್ತದೆ, ಇಲ್ಲದೆ ಇದ್ದರೆ ನಿಮ್ಮ ಆಡಳಿತದಲ್ಲಿ ಎಂಥ ರಾಜಕೀಯ ಮುಂಖಂಡನನ್ನಾದರೂ ಕೂಡ criminal ಖೈದಿಗಳಾಗಿ ಸೇರಿಸುವುದಕ್ಕೆ ಅವಕಾಶವಿದೆ. ಹೀಗೆ ಮಾಡಿರುವ ಅನೇಕ ನಿದರ್ಶನ ಗಳನ್ನು ನಾನು ಕೊಡಬಲ್ಲೆ.

ಜೈಲು ಕೋಡ್‌ಗಳ ಸುಧಾರಣೆ ವಿಚಾರ ಮಾತಾಡುತ್ತಿರುವಾಗ ಇವತ್ತು ಬಂದೀಖಾನೆ ಗಳನ್ನು ಎಷ್ಟು ವ್ಯವಸ್ಥಿತ ರೀತಿಯಿಂದ, ಎಷ್ಟು ಸುಂದರವಾಗಿ ಮಾಡಬೇಕೋ ಆ ಕಡೆ ಸರ್ಕಾರದ ಗಮನ ಹರಿಯಬೇಕು. ಇವೊತ್ತು ಜೈಲಿಗೆ ಕಳಿಸಿದಂಥ ಬಂದಿ, ಅವನು ಜೈಲಿಗೆ ಹೋಗಿಬಂದ ಮೇಲೆ ಅವನ ಮನಸ್ಸಿನಲ್ಲಿ ದೊಡ್ಡ ಪರಿವರ್ತನೆಯಾಗಬೇಕು. ಜೈಲು ವಾಸವನ್ನು ಮಾಡಿ ಹೊರಗೆ ಬಂದರೆ, ತನ್ನ ದಿನಚರಿಯ ಕ್ರಮದಲ್ಲಿ ಮತ್ತು ತನ್ನಗುಣದಲ್ಲಿ ಬದಲಾವಣೆ ಹೊಂದದ ಹೊರತು ಜೈಲಿನ ಸುಧಾರಣೆಯನ್ನು ಖಂಡಿತವಾಗಿ ಸಾಧನೆ ಮಾಡದ ಹಾಗೆ ಆಗುವುದಿಲ್ಲ. ನಾನು ಮೊದಲೆ ಹೇಳಿದ ಹಾಗೆ ಸಮಾಜದಲ್ಲಿ ಅನೇಕರು ಶಿಕ್ಷೆಗೆ ಒಳಗಾಗುತ್ತಾರೆ. ಒಬ್ಬ ಕ್ರೂರತನದಿಂದ ವರ್ತಿಸಿ, ಸಮಾ ಜಕ್ಕೆ ಕೆಟ್ಟ ಕೆಲಸವನ್ನು ಮಾಡಿ ಶಿಕ್ಷಿತನಾಗಿ ಹೋಗುವುದು ಮತ್ತು ಇನ್ನೂ ಕೆಲವರು ಕೇವಲ ಶಿಕ್ಷೆಗೆ ಅರ್ಹರಲ್ಲದೇ ಇದ್ದರೂ ಕೂಡ ಶಿಕ್ಷೆಗೆ ಒಳಗಾಗಿರಬಹುದು. ಇಂಥ ಅನೇಕ ಉದಾಹರಣೆಗಳನ್ನು ನಾವು ಇವತ್ತು ನೋಡುತ್ತಿದ್ದೇವೆ. ಎಂಥೆಂಥ ಅಪರಾಧಗಳನ್ನೂ ಮಾಡಿದಂಥ ಜನರು ಇವತ್ತು ಸಮಾಜದಲ್ಲಿ ತಪ್ಪಿಸಿಕೊಂಡಿದ್ದಾರೆ. ಯಾವ ಜನ ಜೈಲಿನಲ್ಲಿರಬೇಕೋ ಆ ಜನ ಜೈಲಿಗೆ ಹೋಗದೆ ಇದ್ದಾರೆ. ಅದಕ್ಕೆ ಅನೇಕ ಕಾರಣಗಳಿರಬಹುದು. ಯಾರು ಜೈಲಿಗೆ ಹೋಗಬಾರದೋ ಅವರು ಹೋಗಿರುತ್ತಾರೆ. ಹೊಟ್ಟೆಗಾಗಿ, ಬಟ್ಟೆಗಾಗಿ ಬಡಿದಾಡುತ್ತಿರತಕ್ಕ ಜನ, ಅನೇಕ ಸಣ್ಣ ಪುಟ್ಟ ಜನ, ಆಹಾರಕ್ಕಾಗಿ ಹೋರಾಡತಕ ಜನರನ್ನು ಖೈದಿಗಳಾಗಿ ಜೈಲಿಗೆ ಕಳಿಸುತ್ತಾರೆ. ಬೀದಿಯಲ್ಲಿ ಕನ್ನ ಕ್ಕಾಗಿ ನಾಯಿಂತೆ ಅಲೆಯುವ public nuisance ಎಂದು ಅಂಥ ಜನರನ್ನು ಜೈಲಿಗೆ ಅಟ್ಟುತ್ತಾರೆ ಆದರೆ ಬಹಿರಂಗವಾಗಿ ಅನೇಕ ಮಾಡಬಾರದ ಕೆಲಸಗಳನ್ನು ಮಾಡಿ ಮಂತ್ರಿಗಳ ಜೊತೆಯಲ್ಲಿ ದೊಡ್ಡ ದೊಡ್ಡ ಸೊಗಸಾದ ಕಾರುಗಳಲ್ಲಿ ತಿರುಗಾಡಿಕೊಂಡಿರುವುದನ್ನು ನೋಡುತ್ತೇವೆ. ಈ ದೇಶದಲ್ಲಿ ಯಾರು ಗುರುತರವಾದ ಶಿಕ್ಷೆಗೆ ಒಳಗಾಗಬೇಕೋ ಅಂಥವರು ಹೊರಗಡೆ ಇದ್ದಾರೆ. ಯಾವನು ಬಡವನಾಗಿದ್ದಾನೆಯೋ ಅವನಿಗೆ ರಕ್ಷಣೆ ಇಲ್ಲದೆ ಜೈಲಿಗೆ ಹೋಗುತ್ತಾನೆ. ಅವನು ಒಬ್ಬ ಕೆಟ್ಟ ಮನುಷ್ಯ. ಅವನು ಜನತೆಯಿಂದ ದೂರವಿಡಲ್ಪಟ್ಟ ಮನುಷ್ಯನಾಗುತ್ತಾನೆ. ಅದು ಇವತ್ತಿನದಿವಸ ಹೋಗಬೇಕು. ಆದುದರಿಂದ ಇವತ್ತು ಜೈಲಿನ ಮಸೂದೆ ತಂದಿರತಕ್ಕ ಕಾಲದಲ್ಲಿ ಏನು ಸುಧಾರಣೆಯನ್ನು ಮಾಡಿಲ್ಲ. ನೀವು ಅಧಿಕಾರಕ್ಕೆ ಬಂದ ಮೇಲೆ ಬೆಂಗಳೂರು ಸೆಂಟ್ರಲ್ ಜೈಲು ಹಿಂದೆ ಹೇಗಿತ್ತೊ ಆದಕ್ಕಿಂತಲೂ ಕುಂಠಿತವಾಗಿದೆ. ಮಿರ್ಜಾಸಾಹೇಬರು ದಿವಾನರಾಗಿದ್ದಾಗ ಸೆಂಟ್ರಲ್ ಜೈಲನ್ನೂ ಬೇರೆ ಕಡೆಗೆ ವರ್ಗಾಯಿಸಿ ಸುಂದರವಾದ ಜಾಗದಲ್ಲಿ ವಿಶಾಲವಾಗಿ ಅದನ್ನು ಕಟ್ಟಬೇಕು ಎಂದು ಯೋಚಿಸಿದ್ದರು. ಹತ್ತಾರು ವರ್ಷಗಳಾಗಿದ್ದರೂ ಆ ಪ್ಲಾನನ್ನೂ ಜಾರಿಗೆಕೊಡ ತಕ್ಕ ಅವಕಾಶವನ್ನು ಮಾಡಿಕೊಂಡಿಲ್ಲ.

11-00 A.M.

ಸ್ವಾಮಿ, ಬೆಂಗಳೂರಿನಲ್ಲಿರುವ ಜೈಲ್ ಸ್ಥಳಾಂತರ ಮಾಡಿ ಈ ಜಾಗವನ್ನು ವಿಶ್ವವಿದ್ಯಾನಿಲಯ ದವರಿಗೆ ಕೊಟ್ಟು ಅಲ್ಲಿ ಒಂದು ಸ್ಟೇಡಿಯಂ ಕಟ್ಟಬೇಕು ಎಂದು ಹತ್ತಾರು ವರ್ಷಗಳ ಹಿಂದೆ ಮಾಡಿದ

(ಶ್ರೀ ಎಸ್. ಶಿವಪ್ಪ)

ಪ್ಲಾನ್ ಏತಕ್ಕೆ ಜಾರಿಗೆ ತರಲಿಲ್ಲ? ಇದನ್ನು ನೋಡಿದರೆ ನನಗೆ ಅನಿಸುತ್ತದೆ ಸರಕಾರಕ್ಕೆ ಬಂದೀಖಾನೆ ಸುಧಾರಣೆ ಮಾಡುವ ಮನಸ್ಸು ಇಲ್ಲ ಎಂದು. ಸಣ್ಣಪುಟ್ಟ ತಪ್ಪಿಗೆ ಉಗ್ರ ಶಿಕ್ಷೆಯನ್ನು ವಿಧಿಸುವ ಹಾಗೆ ಕಾನೂನಿನಲ್ಲಿ ಅಳವಡಿಸಿದ್ದೀರಿ. ಜೈಲಿನಲ್ಲಿ ಇರತಕ್ಕಂಥ ಕೈದಿಗೆ ಸಣ್ಣಪುಟ್ಟ ತಪ್ಪಿಗಾಗಿ ಶಿಕ್ಷೆ ಮಾಡಬಹುದು ಎಂದು ಸೆಕ್ಷನ್ 45ರಲ್ಲಿ ಪ್ರಿಜನ್ ಆಫೆನ್ಸಿಸ್‌ನಲ್ಲಿ 16 ಕಾರಣಗಳನ್ನು ಕೊಡಲಾಗಿದೆ. ಎಲ್‌ಪುಲೇ ಎಂಬ ಪದ ಹೆಚ್ಚಾಗಿ ಉಪಯೋಗಿಸಲಾಗಿದೆ. ಈ ಅಧಿಕಾರ ಕೊಟ್ಟಿರುವುದು ಸರಿಯಾಗಿಲ್ಲ. ಜೈಲಿಗೆ ಕಳಿಸುವುದೇ ಒಂದು ಶಿಕ್ಷೆ. ಇದಲ್ಲದೆ ಇನ್ನೂ ಹೆಚ್ಚಾಗಿ ಶಿಕ್ಷೆ ಮಾಡಲು ಹೊರಟಿದ್ದೀರಿ. ಇದು ಬಹಳ ಕೆಟ್ಟ ಪರಿಣಾಮ ಉಂಟು ಮಾಡುತ್ತದೆ ಎಂದು ಹೇಳಲು ಬಯಸುತ್ತೇನೆ. ಈ ರೀತಿ ಪುನಃ ಶಿಕ್ಷೆ ಮಾಡಲು ಹೊರಟಿರುವುದು ಸರಿಯಲ್ಲ. ಇಂಥ ಕಾನೂನು ಮಾಡಲು ಕಾರಣವೇನು? ಶಿಕ್ಷೆ ವಿಧಿಸಿದ ಕೈದಿಯನ್ನು ಸುಧಾರಣೆ ಮಾಡುವುದರ ಬದಲು ಇನ್ನೂ ಹೆಚ್ಚು ಕೆಟ್ಟವನು ಆಗುವ ಹಾಗೆ ಮಾಡುತ್ತಿದ್ದೀರಿ. ಬಂದೀಖಾನೆಯಲ್ಲಿ ಎಷ್ಟು ಸುಧಾರಣೆ ಮಾಡಬೇಕೋ ಅಷ್ಟು ಸುಧಾರಣೆ ಮಾಡಿಲ್ಲ ಎಂಬುದು ಇದರಿಂದ ಕಂಡುಬರುತ್ತದೆ. ಇದರಲ್ಲಿ ಸಂಶಯ ದೃಷ್ಟಿ ಇರಕೂಡದು. ಮೃಗದ ಹಾಗೆ ಬಂದೀಖಾನೆಯಲ್ಲಿ ಕೈದಿ ಇರಕೂಡದು. ಅವನಿಗೆ ಕೈಗಾರಿಕೆ ಕಲಿಸಿ ಸಮಾಜದಲ್ಲಿ ಒಳ್ಳೇ ಮನುಷ್ಯನಾಗಿ ಬಾಳುವ ಹಾಗೆ ಪರಿವರ್ತನೆ ಮಾಡಬೇಕಾದುದು ಅಗತ್ಯ. ಇಂಗ್ಲೆಂಡ್ ಅಮೇರಿಕಾ ದೇಶದಲ್ಲಿ ಇರುವ ಹಾಗೆ ಇಲ್ಲಿಯೂ ಸುಧಾರಣೆ ಮಾಡಬೇಕು. ಇದಲ್ಲದೆ ಜೈಲಿನಲ್ಲಿ ಎಲ್ಲ ಸೌಕರ್ಯ ಕೊಡತಕ್ಕಂಥಾದ್ದು ನ್ಯಾಯವಾದುದು. ಒಟ್ಟಿನಲ್ಲಿ ಮನುಷ್ಯ ಜೈಲಿನಲ್ಲಿ ಮೃಗದಂತೆ ಬಾಳಬಾರದು. ಆದುದರಿಂದ ಸುಧಾರಣೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. 1947 ಕ್ಕೆ ಮುಂಚೆ ಜೈಲು ವಾಸದ ಅನುಭವ ನಿಮಗೆ ಇದೆ. ಈಗ ನಿಮಗೆ ಜೈಲಿಗೆ ಹೋಗುವ ಅವಕಾಶವಿಲ್ಲ. ನಮ್ಮ ಪಕ್ಷದವರಿಗೆ ಕಿರುಕಳ ಕೊಡೋಣ ಎಂಬ ಮನೋಭಾವ ನಿಮಗೆ ಇರಬಹುದು. ಆದರೆ ಕೆಲವೇ ದಿವಸಗಳಲ್ಲಿ ನಾವು ಅಧಿಕಾರಕ್ಕೆ ಬಂದು ನೀವು ಜೈಲಿಗೆ ಹೋಗುವ ಸಂದರ್ಭ ಬರಬಹುದು. ಆಗ್ಗೆ ನಿಮಗೆ ತೊಂದರೆಯಾಗಬಹುದೆಂದು ನಾನು ಎಚ್ಚರಿಕೆ ಕೊಡ ಬಯಸುತ್ತೇನೆ. ಅದಕ್ಕೆ ಬಹಳ ದಿವಸವೇನೂ ಇಲ್ಲ. ಆದ್ದರಿಂದ ಜೈಲು ಸುಧಾರಣೆ ಮಾಡುವುದು ಒಳ್ಳೆಯದು. ಇಷ್ಟು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯ ಗೌಡ (ರಾಮನಗರಂ).—ಸ್ವಾಮಿ, ಈಗ ಮೈಸೂರು ರಾಜ್ಯದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಕಾನೂನು ಜಾರಿಯಲ್ಲಿವೆ. ಅವುಗಳನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಕಾನೂನು ಮಾಡಬೇಕು, ಸುಧಾರಣೆ ಮಾಡಬೇಕು ಎನ್ನತಕ್ಕಂಥ ಸದುದ್ದೇಶದಿಂದ ಈ ಮಸೂದೆ ನಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ಮುಂದೆ ಈಗ ಇರತಕ್ಕಂಥ ಮಸೂದೆ ಬಹಳ ಅವಶ್ಯಕವಾಗಿದೆ. ಆದರೆ ನಮ್ಮ ವಿರೋಧ ಪಕ್ಷದ ಮಿತ್ರರು ಯಾವ ಮಸೂದೆ ಇದ್ದರೂ ಅದನ್ನು ವಿರೋಧಿಸುತ್ತಾರೆ. ಎಂಥ ಸುಧಾರಣೆ ಮಾಡತಕ್ಕ ಮಸೂದೆ ಇದ್ದರೂ ಕೂಡ ಏನಾದರೂ ತಪ್ಪು ಕಂಡುಹಿಡಿಯೋಣ, ವಿರೋಧಿಸೋಣ ಎಂಬ ಮನೋಭಾವ ನಿಜವಾಗಿಯೂ ಸರಿಯಲ್ಲ. ವಿರೋಧ ಮಾಡುವಾಗ್ಗೆ ಇದರಲ್ಲಿ ಏನಾದರೂ ಇದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕು. ಇಂಡಿಯನ್ ಪಿನಲ್ ಕೋಡ ಪ್ರಕಾರ ಶಿಕ್ಷೆ ಕೊಡತಕ್ಕಂಥಾದ್ದು ಅನೇಕ ಉದ್ದೇಶ ಇವೆ. ಸಮಾಜ ಘಾತುಕರು ಇತರರಿಗೆ ತೊಂದರೆ ಕೊಡತಕ್ಕಂಥವರು ಸಮಾಜದಲ್ಲಿ ಇದ್ದರೆ ತೊಂದರೆಯಾಗುತ್ತದೆ. ಅವರಿಗೆ ಬುದ್ಧಿ ಕಲಿಸಬೇಕು ಅವರನ್ನು ಸುಧಾರಿಸಬೇಕು ಎಂಬ ಉದ್ದೇಶ ಇದೆ. ಅಂಥವರಿಗೆ ಶಿಕ್ಷೆಯಾದರೆ ಬಾಕಿಯವರು ಅದನ್ನು ನೋಡಿ ಇಂಥ ಕೆಟ್ಟ ಕೆಲಸ ಮಾಡಿದರೆ ಇಂಥ ಶಿಕ್ಷೆಯಾಗುತ್ತದೆ, ಇಂಥ ಕೆಲಸ ಮಾಡಬಾರದು ಎಂದು ಒಂದು ಪಾಠ ಕಲಿಯಬಹುದು. ಅನೇಕ ಪದ್ಧತಿಯ ಶಿಕ್ಷೆ ಪೀನಲ್ ಕೋಡಿನಲ್ಲಿ ಏರ್ಪಾಡು ಮಾಡಿದ್ದಾರೆ. ಅದರಲ್ಲಿ ಸಿಂಪಲ್ ಇಂಪ್ರಿಜನ್‌ಮೆಂಟ್ ಅಂದರೆ ಸಾದಾ ಸಜಾ, ಕಠಿಣ ಸಜಾ ಜೀವಾವಧಿ ಶಿಕ್ಷೆ, ಹೀಗೆ ಅನೇಕ ವಿಧವಾದ ಸಜಾ ಇವೆ.

ಜೀವಾವಧಿ ಶಿಕ್ಷೆ ಕೊಡುತ್ತಾರೆ, ಮರಣ ದಂಡನೆ ವಿಧಿಸುತ್ತಾರೆ. ಹೀಗೆ ಯಾವ ಯಾವ ತಪ್ಪು ಮಾಡಿದರೆ ಯಾವ ವಿಧವಾದ ಶಿಕ್ಷೆ ಕೊಡಬೇಕೋ ಆ ವಿಧವಾದ ಶಿಕ್ಷೆ ಕೊಡುವುದರಿಂದ ಸಮಾಜಕ್ಕೆ ಆಗತಕ್ಕ ಪ್ರಯೋಜನವೇನು ಎನ್ನುವುದನ್ನು ಯೋಚನೆ ಮಾಡಿ ನಮ್ಮ ನ್ಯಾಯಾಂಗದವರು ಯಾವ ಯಾವ ತಪ್ಪಿತಸ್ಥರಿಗೆ ಏನೇನು ಶಿಕ್ಷೆ ವಿಧಿಸಬೇಕೋ ಅದನ್ನು ವಿಧಿಸುತ್ತಾರೆ. ಹೀಗೆ ಕಡ್ಡಾಯವಾಗಿ ಶಿಕ್ಷೆ ಕೊಡಬೇಕೆಂದು ಹೇಳಿ ಎಲ್ಲರೂ ಒಪ್ಪಿಕೊಂಡಿರತಕ್ಕ ಕಾಲದಲ್ಲಿ ಒಂದೇ ಮಾತಿನಲ್ಲಿ ಜೈಲು ಸುಧಾರಣೆ ಆಗಬೇಕು ಎಲ್ಲರಿಗೂ ಹೊರಗಡೆ ಏನು ಸೌಕರ್ಯ ಇದೆ ಆ ಸೌಕರ್ಯಗಳನ್ನೆಲ್ಲಾ ಕೊಡಬೇಕೆಂದು ಹೇಳಿ ಮಾನ್ಯ ಮಿತ್ರರು ಹೇಳುವುದಾದರೆ ನಿಜವಾಗಿಯೂ ಅದು ದೇಶಕ್ಕೆ ಕ್ಷೇಮವೇ, ಸಮಾಜಕ್ಕೆ ಒಳ್ಳೆಯದಾಗುತ್ತದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿ ಬರುತ್ತದೆ. ಈಗಿನ ನಮ್ಮ ಬಂದೀಖಾನೆಗಳಲ್ಲಿ ಯಾವ ವಿಧವಾದ ಕೈದಿಗಳಿಗೆ ಯಾವ ವಿಧವಾದ ಏರ್ಪಾಡುಗಳನ್ನ

ಮಾಡಬೇಕು ಎನ್ನುವುದನ್ನು ನಿಗದಿ ಮಾಡಿದ್ದಾರೆ. 16 ವರ್ಷಕ್ಕೆ ಕಡಿಮೆ ಇರತಕ್ಕ ವಯಸ್ಸಿನವರು ಶಿಕ್ಷೆಗೆ ಒಳಗಾದರೆ ಅವರನ್ನು ಪ್ರತ್ಯೇಕವಾಗಿಟ್ಟು ಸುಶಿಕ್ಷಿತರಾದ ಪ್ರಜೆಗಳನ್ನಾಗಿ ಮಾಡುವುದಕ್ಕೆ ಏರ್ಪಾಡು ಇದೆ. ಜ್ಯೂವಿನೈಲ್ ಆಫೆಂಡರ್ಸ್‌ಗೆ ಬೇರೆ ವಿಧವಾದ ಏರ್ಪಾಡು ಮಾಡಿರುವುದು ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಷಯ. ಧಾರವಾಡದಲ್ಲಿ ಅವರಿಗೆ ಒಂದು ಸ್ಕೂಲನ್ನು ತೆಗೆದು ಅವರಿಗೆ ವಿದ್ಯೆ, ಆರೋಗ್ಯಾಭಿವೃದ್ಧಿ ಮತ್ತು ಅವರ ಮನಸ್ಸಿನಮೇಲೆ ಪರಿವರ್ತನೆಯಾಗತಕ್ಕ ಏರ್ಪಾಡು ಗಳನ್ನು ಮಾಡಿದ್ದಾರೆ. ಸಾಧಾರಣವಾಗಿ ಯಾವ ವಿಧವಾದ ಶಿಕ್ಷೆಗೆ ಯಾವ ವಿಧವಾದ ಕೆಲಸ ಕೊಡಬೇಕು ಮತ್ತು ಅದರ ಮೇಲ್ವಿಚಾರಣೆ ಯಾವ ರೀತಿ ಮಾಡಬೇಕು ಎನ್ನುವುದು ಏರ್ಪಾಡಾಗಿದೆ. ಅದಕ್ಕೆ ತಕ್ಕ ಕಾನೂನುಗಳು ಇವೆ. ತಲೆಗೆಲ್ಲಾ ಒಂದೇ ಮಂತ್ರ ಎಂದು ಮಾಡುವುದಕ್ಕಾಗುವುದಿಲ್ಲ. ಸುಧಾರಣೆಯಾಗಬೇಕು, ಯಾವ ತರಹ ಆಗಬೇಕೆನ್ನುವುದರಲ್ಲಿ ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಸಮಾಜ ಘಾತುಕತನ ಆಗದೇ ಇರುವಂತೆ ಮಾಡುವುದು ಆದ್ಯ ಕರ್ತವ್ಯವಾಗಿದೆ; ಆ ಹೊಣೆಗಾರಿಕೆ ಎಲ್ಲರಿಗೂ ಒಳಪಟ್ಟಿದೆ ಎಂಬುದನ್ನು ನಾವು ಮರೆಯುವ ಹಾಗಿಲ್ಲ. ಜೈಲಿನಲ್ಲಿ ನಾವು ನೋಡಿದ್ದೇವೆ, ಶ್ರೀಮಾನ್ ಶಿವಪ್ಪನವರಿಗೆ ಗೊತ್ತಿರಬಹುದು ಪಂಚರಂಗಿಗಳು ಎಂದು ಇದ್ದಾರೆ. ಪಂಚರಂಗಿ ಯಾದವನ ಸುಧಾರಣೆಯಾಗಬೇಕೆಂದು ಶ್ರೀಮಾನ್ ಶಿವಪ್ಪನವರು ಸೂಚಿಸಿದ್ದಾರೆ. ಅದು ಯಾವ ರೀತಿಯಾಗಬೇಕೆನ್ನುವುದನ್ನು ನಾನು ತಿಳಿದುಕೊಳ್ಳುವುದಕ್ಕೆ ಆಸಕ್ತನಾಗಿದ್ದೇನೆ. ಅವರು ಮೊದಲು ನಿಂದ ಕಡೆಯವರೆಗೂ ಕೂಡ ಜೈಲುವಾಸವೇ ಸೊಗಸು ಎಂಬ ಭಾವನೆ ಮಾಡಿಕೊಂಡಿರತಕ್ಕ ಜನವೇನೋ ಎಂದು ನನಗೆ ಅನಿಸುತ್ತದೆ. ಜೈಲಿನಿಂದ ಹೊರಗಡೆ ಬರುವಾಗ ಅವರು ಅನ್ನುತ್ತಾರೆ ಯಂತೆ. ನನ್ನ ಕೊಠಡಿಯಲ್ಲಿ ನನಗೆ ಕೊಡತಕ್ಕ ಊಟದ ಮತ್ತು ಇತರ ಸಲಕರಣೆಗಳನ್ನೆಲ್ಲಾ ಹಾಗೆಯೇ ಇಟ್ಟಿರಿ ಎಂದು ಹೇಳಿ ಹೊರಗೆ ಬರುತ್ತಾರೆ ಎಂದು ನಾನು ಕೇಳಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾರನ್ನು ಕೇಳಿದಿರಿ?

ಶ್ರೀ ಟಿ. ಮಾದಯ್ಯ ಗೌಡ.—ತಮ್ಮಂಥವರು ಹೇಳಿದ್ದನ್ನು ಕೇಳಿದ್ದೇನೆ. ಈಗಿನ ಜೈಲರು ಓಬೀರಾಯನ ಕಾಲದ ಜೈಲರು ಇದ್ದ ಹಾಗೆ ಇದ್ದಾರೆ ಎಂದು ಶ್ರೀಮಾನ್ ಶಿವಪ್ಪನವರು ಹೇಳಿದರು. ಓಬರಾಯ ಯಾರೋ ಗೊತ್ತಿಲ್ಲ. ನನಗೆ ಬಹುಶಃ ಆ ಕಾಲದಲ್ಲಿ ಹೇಗಿತ್ತು ಎನ್ನುವುದೂ ಕೂಡ ಗೊತ್ತಿಲ್ಲ. ಓಬೀರಾಯನ ಕಾಲಕ್ಕೂ ಈಗಿನ ಕಾಲಕ್ಕೂ ಹೋಲಿಕೆ ಮಾಡುವುದು ಎಷ್ಟುಮಟ್ಟಿಗೆ ಉಚಿತವೋ ಗೊತ್ತಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಓಬೀರಾಯ ತಮ್ಮ ಕಡೆಯವನು, ರಾಮನಗರದವರು ಎನ್ನುತ್ತಾರೆಯಲ್ಲಾ;

ಶ್ರೀ ಟಿ. ಮಾದಯ್ಯ ಗೌಡ.—ಏನೋ ಶಿವಮೊಗ್ಗಾದ ಕಡೆಯಿಂದ ಬಂದಿದ್ದರೂ ಬಂದಿದ್ದಿರ ಬಹುದು, ನನಗೆ ಗೊತ್ತಿಲ್ಲ. ಹಿಂದೆ ಬ್ರಿಟಿಷರ ಕಾಲದಲ್ಲಿ ಇದ್ದಂಥ ಜೈಲುಗಳ ಸ್ಥಿತಿಗತಿಗೂ ಈಗ ನಾವು ನೋಡುತ್ತಾ ಇರತಕ್ಕ ಜೈಲುಗಳ ಸ್ಥಿತಿಗತಿಗೂ ಅನೇಕ ವ್ಯತ್ಯಾಸಗಳಿವೆ. ವಿದ್ಯಾ ಸೌಕರ್ಯ ದಲ್ಲಂತೂ ಬಹಳ ಹೆಚ್ಚಿನ ಸೌಕರ್ಯವನ್ನು ಮಾಡಿದೆ. ಜೈಲಿನಲ್ಲಿರತಕ್ಕವನು ಸಾಧಾರಣ ಶಿಕ್ಷೆಯನ್ನು ಅನುಭವಿಸಲಿ ಅಥವಾ ಕಠಿಣ ಶಿಕ್ಷೆಯನ್ನನುಭವಿಸುತ್ತಾ ಇರಲಿ ಕಡೆಯವರೆಗೂ ಅವನ ಆರೋಗ್ಯ ಚೆನ್ನಾಗಿರಬೇಕು, ಅವನು ಜೈಲಿನಿಂದ ಆಚೆಗೆ ಬರುವುದರಲ್ಲಿ ಕೆಲವು ಮಟ್ಟಿಗಾದರೂ ಅವನ ತೂಕ ಜಾಸ್ತಿಯಾಗಿರಬೇಕು ಎಂದು ಹೇಳಿ ವಿಶೇಷವಾದಂತಹ ಒಂದು ಕೇರ್ ತೆಗೆದುಕೊಳ್ಳುತ್ತಾರೆ ಎನ್ನುವುದು ಈ ಮನುದೆಯಿಂದಲೇ ವ್ಯಕ್ತವಾಗುತ್ತದೆ. ಹೀಗೆಯೇ ಸ್ಯಾನಿಟರಿ ಕಂಡೀಷನ್ ವಿಷಯದಲ್ಲಿ ಕೂಡ ಬಹಳ ನಿಗಾ ಕೊಡುತ್ತಾರೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ರಾಜಕೀಯ ಕೈದಿಗಳ ವಿಷಯ ಮಾನ್ಯ ಮಿತ್ರರು ಹೇಳಿದರು. ಶಿಕ್ಷೆಯನ್ನು ಅನುಭವಿಸುತ್ತಾ ಇರತಕ್ಕವರು ಜೈಲಿಗೆ ಹೋಗತಕ್ಕ ಜನ ರಾಜಕೀಯ ಕೈದಿಗಳಾಗಲೀ ನಾವಾಗಲೀ ಅವರಾಗಲೀ ಇನ್ನೊಬ್ಬರಾಗಲಿ ಒಬ್ಬರಿಗೊಬ್ಬರಿಗೆ ವ್ಯತ್ಯಾಸಗಳನ್ನು ಮಾಡುವುದು ಈ ಪ್ರಜಾಪ್ರಭುತ್ವದಲ್ಲಿ ಸರಿಯೇ ಎಂದು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ರಾಜಕೀಯ ಕೈದಿಗಳು ತಪ್ಪು ಮಾಡುತ್ತಾರೆ ಶಿಕ್ಷೆಗೆ ಅರ್ಹರಾಗಿದ್ದಾರೆ ಎಂದಮೇಲೆ ಏಕೆ ವ್ಯತ್ಯಾಸ ಮಾಡಬೇಕೋ ಗೊತ್ತಿಲ್ಲ. ಆದರೂ ಕೆಲವು ವ್ಯತ್ಯಾಸಗಳನ್ನು ಇಟ್ಟಿದ್ದಾರೆ ಚೆನ್ನಾಗಿ ಬಾಳಿ ಬದುಕಿ ಏನೋ ಒಂದು ತಪ್ಪು ಮಾಡಿದ್ದಾರೆ ಎಂದು ಹೇಳಿ ಫಸ್ಟ್‌ಕ್ಲಾಸ್ ಖೈದಿ, ಸೆಕೆಂಡ್ ಕ್ಲಾಸ್ ಖೈದಿ ಎಂಬ ನಿಬಂಧನೆ ಮಾಡಿ ಅದಕ್ಕೆ ತಕ್ಕಂತೆ ಏರ್ಪಾಡು ಮಾಡಿದ್ದಾರೆ ಅದು ಅವರಿಗೆ ಗೊತ್ತು. ಹೀಗೆ ಯಾವ್ಯಾವ ಖೈದಿಗಳಿಗೆ ಯಾವ್ಯಾವ ತರಹ ಅನುಕೂಲ ಮಾಡಿಕೊಡಬೇಕೆಂದು ಹೇಳಿದೆ, ಜೈಲಿನಲ್ಲಿ ಬೇಕಾದಷ್ಟು ಸುಧಾರಣೆ ಗಳು ಆಗಿವೆ, ಮತ್ತು ಆಗಬೇಕಾಗಿವೆ, ಅದರೂ ಅವರು ಏನೇನು ಸುಧಾರಣೆ ಆಗಬೇಕೆಂಬ ಒಂದು ಪಟ್ಟಿ ಕೊಡುತ್ತಾರೆಂದು ನಾನು ಆಶೆ ಪಟ್ಟೆ. ಈಗ ಮೃಗಗಳಂತೆ ವಾಸಮಾಡುತ್ತಿದ್ದಾರೆ ಮನುಷ್ಯ ರಂತೆ ವಾಸಮಾಡುತ್ತಿಲ್ಲ ಎಂದು ಹೇಳಿದರು. ಆದರೆ ನಿಜಸ್ಥಿತಿ ಆರೀತಿ ಇಲ್ಲ ಅವರ ಊಟದಲ್ಲಿ ಅವರ ಬಟ್ಟೆಯಲ್ಲಿ ಬಹುಮಟ್ಟಿನ ಏರ್ಪಾಡುಗಳನ್ನು ಮಾಡಿದ್ದಾರೆ ಜೈಲಿನಿಂದ ಹೊರಗಡೆ ಬಂದಾಗ ಅವರು

(ಶ್ರೀ ಟಿ. ಮಾದಯ್ಯಗೌಡ)

ಉತ್ತಮ ಜನಾಂಗವಾಗಬೇಕು ಎಂಬ ದೃಷ್ಟಿಯಿಂದಲೇ ಅವರಿಗೆ ಆಟ ಪಾಟಗಳನ್ನು ಏರ್ಪಾಡು ಮಾಡಿರುವುದು, ಸಾಲದ್ದಕ್ಕೆ ಅವರು ಹೊರಗಡೆ ಬರುವುದರೊಳಗೆ ಅವರಿಗೆ ಏನಾದರೂ ಒಂದು ಕೈಗಾರಿಕೆಯನ್ನು ಹೇಳಿಕೊಟ್ಟು ಕೈಗಾರಿಕೆಯಲ್ಲಿ ಶಿಕ್ಷೆ ಪಡೆದಿರುವುದಕ್ಕೆ ಅವಕಾಶಗಳನ್ನು ಕಲ್ಪಿಸಿ ಕೊಟ್ಟಿರುತ್ತಾರೆ. ಸ್ವಲ್ಪ ಹಣವನ್ನೂ ಕೂಡ ಶೇಖರಿಸಿ ಜೈಲಿನಿಂದ ಹೊರಗೆ ಬರುವಾಗ ಅವರಿಗೆ ಹಣ ಕೊಡುತ್ತಾರೆ. ಎಲ್ಲರನ್ನೂ ಒಂದೇ ವಿಧವಾದ ರೀತಿಯಿಂದ ಕಾಣುತ್ತಾರೆ ಎನ್ನುವುದನ್ನು ನಾನು ನಂಬುವುದಿಲ್ಲ ಯಾರು ಅಲ್ಲಿಗೆ ಹೋಗಿ ಮತ್ತೆ ತಪ್ಪು ಮಾಡುತ್ತಾರೆ ಅಂತಹವರ ವಿಷಯದಲ್ಲಿ ಸ್ವಲ್ಪ ಕಠಿಣವಾಗಿರುವುದು ನ್ಯಾಯವೇ ಅಲ್ಲವೇ ಎಂಬುದನ್ನು ನಾವು ಸ್ವಲ್ಪ ವಿಮರ್ಶೆ ಮಾಡ ಬೇಕಾಗಿದೆ. ಹೊರಗಡೆಯಲ್ಲಿ ತಪ್ಪು ಮಾಡಿ ಒಳಗಡೆಯೂ ತಪ್ಪು ಮಾಡಿದ ಎಂದರೆ ಅದು ಸ್ವಲ್ಪ ವಿಷಾದಕರವಾದ ಸಂಗತಿ. ಸಣ್ಣದಾಗಿ ಭಾವನೆ ಮಾಡತಕ್ಕ ಸಂಗತಿಯಲ್ಲ. ನಾವು ಹಿಂದೆ ಸ್ವಲ್ಪ ದಿವಸ ಜೈಲಿನಲ್ಲಿ ಇದ್ದಾಗ ನಾನು ಬಲ್ಲೆ ಜೈಲಿನಲ್ಲಿ ಚಾಕು ತೋರಿಸುವುದು, ವ್ಯಾಜ್ಯವಾಡುವುದು ಇಂತಹ ಪ್ರಸಂಗಗಳನ್ನು ಕಣ್ಣಾರೆ ಕಂಡಿದ್ದೇನೆ. ಅಂತಹ ತಪ್ಪುಗಳನ್ನು ಮಾಡತಕ್ಕವರಿಗೆ ಅಯ್ಯೋ ಪಾಪ ಎನ್ನುವುದು ಎಷ್ಟು ಮಟ್ಟಿಗೆ ಸಾಧುವೋ ನನಗೆ ಗೊತ್ತಿಲ್ಲ.

ಆದರೆ ನಾವು ಇಲ್ಲಿ ಇನ್ನೂ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ಜೈಲಿನಲ್ಲಿ ಯಾರು ಒಳ್ಳೆ ನಡತೆಯನ್ನಿಟ್ಟುಕೊಂಡಿರುತ್ತಾರೋ ಅಂಥವರಿಗೆ ಶಿಕ್ಷಾವಧಿಯನ್ನು ಕಡಮೆ ಮಾಡುತ್ತಾರೆ ಎಂಬ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ. ಅಲ್ಲ ಒಳ್ಳೆಯ ನಡತೆಯಲ್ಲರತಕ್ಕವರ ಬಗ್ಗೆ ಒಂದು ಟಿಕೆಟ್ಟನ್ನಿಟ್ಟು ಒಂದು ರೆಕಾರ್ಡನ್ನೇ ಮೈನ್‌ಟೈನ್ ಮಾಡುತ್ತಾರೆ. ಇದು ಈಗ ವಾಡಿಕೆಯಲ್ಲಿದೆ. ಒಳ್ಳೆಯ ನಡತೆಯಲ್ಲರತಕ್ಕವರನ್ನು ಪೆರೋಲ್ ಮೇಲೆ ಬಿಡುತ್ತಾರೆ, ಅವರ ಬಂಧುಗಳು, ಆಪ್ತೇಷ್ಟರೂ ಬಂದರೆ, ನೋಡುವುದಕ್ಕೆ ಬಿಡುತ್ತಾರೆ. ಹೊರಗಡೆಯಿಂದ ಊಟ ತರಿಸಿಕೊಡುವುದಕ್ಕೂ ಅವಕಾಶ ಮಾಡಿದ್ದಾರೆ. ಇಷ್ಟೆಲ್ಲಾ ಅನುಕೂಲಗಳು ಆ ಬೀರಾಯನ ಕಾಲದಲ್ಲಿದ್ದವೋ, ಇಲ್ಲವೋ ಆ ವಿಚಾರ ನನಗೆ ತಿಳಿಯದು. ಇದನ್ನೆಲ್ಲ ನೋಡಿದರೆ ಜನರಿಗೆ ನಾಳೆ ಹೊರಗಡೆ ತೊಂದರೆ ಪಡುವುದಕ್ಕಿಂತ ಜೈಲಿನಲ್ಲಿರುವುದೇ ಲೇಸೆಂಬ ಭಾವನೆ ಬರುವಂಥ ಒಂದು ಪರಿಸ್ಥಿತಿ ಬಂದೀತೋ ಏನೋ ಎಂತ ಅನಿಸುತ್ತಿದೆ. ಆದರೆ ಇಷ್ಟೆಲ್ಲ ಸೌಕರ್ಯ ಗಳು ಜೈಲಿನಲ್ಲಿರಬಾರದೆಂದು ಎಂತ ನಾನಾದರೋ ಬಹಳ ಕಳಕಳಿಯಿಂದ ಈ ಸಭೆಯಲ್ಲಿ ಹೇಳು ವುದಕ್ಕೆ ಇಷ್ಟಪಡುತ್ತೇನೆ. ಈಗ ಜೈಲಿನಲ್ಲಿಟ್ಟಿರತಕ್ಕ ವ್ಯವಸ್ಥೆ ಸರಿಯಾಗಿದೆ. ಅಲ್ಲಗೆ ಹೋಗತಕ್ಕಂಥ ಜನರಿಗೆ ಒಂದು ಭೀತಿಯಿರಬೇಕು. ಎಲ್ಲಿದ್ದರೇನು ಎಂಬ ಒಂದು ಭಾವನೆ ಅವರಲ್ಲಿ ಉಂಟಾಗ ಬಾರದು. ಈಗ ರೂಲ್ಸಿನಲ್ಲಿ ಅಳವಡಿಸಿರತಕ್ಕದ್ದು ಸರಿಯಾಗಿದೆ. ಯಾವ ಯಾವ ಕೋಮಿನವರಿಗೆ ಯಾವರೀತಿ ಪೂಜೆ ಪುನಸ್ಕಾರಗಳು ನಡೆಯಬೇಕು, ಯಾರಿಗೆ ಭಜನೆ ಇತ್ಯಾದಿಗಳು ಬೇಕು, ಇಂಥವು ಗಳನ್ನೆಲ್ಲ ಒದಗಿಸಲು ಈಗಿರತಕ್ಕ ರೂಲ್ಸಿನಲ್ಲಿ ಅವಕಾಶವಿದೆ. ಪ್ರತಿ ವಾರವೂ ಯೋಗ್ಯರಾಗಿರ ತಕ್ಕಂಥ ದೊಡ್ಡ ದೊಡ್ಡ ಸನ್ಯಾಸಿಗಳು ಅಲ್ಲಿಗೆ ಹೋಗಿ ಉಪನ್ಯಾಸ ಇತ್ಯಾದಿಗಳನ್ನು ಮಾಡು ತ್ತಿದ್ದಾರೆ. ಈ ಏರ್ಪಾಡುಗಳನ್ನು ಮಾಡಿರತಕ್ಕದ್ದು ಒಳ್ಳೆಯದೆಂದು ನಾನು ಭಾವಿಸಿದ್ದೇನೆ. ಇನ್ನು ನಮ್ಮ ಸಂಸ್ಥಾನದಲ್ಲಿ ಅನೇಕ ದೊಡ್ಡ ದೊಡ್ಡ ಜೈಲುಗಳಿವೆ. ಹೊಸ ಮೈಸೂರಿನ ಭಾಗ ದಲ್ಲೂ ವಿಶಾಲವಾದ ಜೈಲುಗಳಿರುತ್ತವೆ. ಬೆಂಗಳೂರಿನಲ್ಲಿರತಕ್ಕ ಜೈಲು ಈಗಿರುವುದರ 4-5ರಷ್ಟು ಜಾಸ್ತಿ ಇತ್ತು. ಆದರೆ ಈಗ ಇದನ್ನು ಕಡಮೆಮಾಡಲಾಗಿದೆ. ಆದರೆ ಈ ಜೈಲುಗಳನ್ನು ಒಳ್ಳೆಯ ಹವಾಮಾನ ಇರುವ ಕಡೆ ಇಡಬೇಕೆಂದು ಶ್ರೀ ಎಸ್. ಶಿವಪ್ಪನವರು ಏನು ಹೇಳಿದ್ದಾರೆ ಅದನ್ನು ನಾನೂ ಸಹಾ ಅನುಮೋದಿಸುತ್ತೇನೆ. ಹೀಗೆ ಎಲ್ಲರನ್ನೂ ಒಂದೇಕಡೆ ಇಡುವ ಬದಲು ಪ್ರತಿಯೊಂದು ಜಿಲ್ಲಾ ಕನಿಬೆಗಳಲ್ಲೂ ಇವುಗಳನ್ನಿಡತಕ್ಕದ್ದು ಒಳ್ಳೆಯದೆಂದು ನಾನು ತಿಳಿಸಲಿಚ್ಛಿಸುತ್ತೇನೆ. ಇಲ್ಲ ವಾಸದ ಮನೆಗಳಿಗೆ ಜಾಗವಿಲ್ಲದೆ ಒದ್ದಾಡುತ್ತಿರುವಾಗ ಇದನ್ನು ಬೇರೆ ಒಳ್ಳೇ ಹವಾ ಇರುವ ಕಡೆಗೆ ಬದಲಾವಣೆ ಮಾಡಿದರೆ, ಇಲ್ಲ ವಾಸದ ಮನೆಗಳಿಗೆ ಜಾಗ ಸಿಕ್ಕಲು ಅವಕಾಶವಾಗುತ್ತದೆ.

ಇನ್ನು ಸಿವಿಲ್ ಪ್ರಿಜನರ್ಸುಗಳಿಗೆ ಡಿಕ್ಕಿ ಹೋಲ್ಡರುಗಳು ಹಾಸಿಗೆ, ಉಡುಪು ಇತ್ಯಾದಿಗಳನ್ನೆಲ್ಲ ಕೊಡಬೇಕೆಂಬ ನೇಮವಿದೆ. ಒಂದುವೇಳೆ ಅವರು ಆ ಸೌಕರ್ಯಗಳು ಸರಿಯಾಗಿಲ್ಲ ಎಂದು ಹೇಳಿದರೆ ಜೈಲಿನವರು ನಾಳೆ ಅವರನ್ನು ಹೊರಗಡೆಗೆ ಬಿಟ್ಟುಬಿಡುತ್ತಾರೇನೋ ಎಂಬ ಒಂದು ಅನುಮಾನ ಬಂದಿದೆ.

Mr. SPEAKER.—That is under the Civil Procedure Code.

ಶ್ರೀ ಟಿ. ಮಾದಯ್ಯಗೌಡ.—ಆ ಪ್ರಿಜನರ್ ನನಗೆ ಒಳ್ಳೇ ಮಂಡವೇ ಬೇಕು, ಹಾಸಿಗೆ ಬೇಕು ಎಂದು ಕೇಳಿದರೆ ಅದು ಹೇಗೆ ಒದಗಿಸಲು ಸಾಧ್ಯ? ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇದು ಒಂದು ಸಾಮಾನ್ಯವಾದ ಬಿಲ್ಲು, ಇದರಲ್ಲಿ ವಾದಮಾಡತಕ್ಕಂಥ ಅವಕಾಶವೇ

ಇರುವುವಿಲ್ಲ. ಆದುದರಿಂದ ಇದನ್ನು ವಿರೋಧಿಸುವುದರಲ್ಲಿ ಅರ್ಥವಿಲ್ಲ. ನಾನು ಇದನ್ನು ಸಂಪೂರ್ಣವಾಗಿ ಪುಷ್ಟೀಕರಿಸುತ್ತೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri B. R. SUNTHANKAR (Belgaum City).—Mr. Speaker, Sir, this legislation aims at bringing uniform law in the whole of the State in the matter of prisons. In this House a number of legislations brought with the intention of bringing uniform law in the State. But, these various Bills that we are passing are almost copies of the old and existing Acts in the State either they are ditto copies or a sort of amalgams. In bringing this Bill, there was an opportunity for the Government to improve on the old Acts, taking into consideration the new factors and the new situations that exist at present. But, that has not been, unfortunately, done. The old legislation continues as it is. There is nothing new in this Bill and the provisions of the old Acts are included here. Sir, various areas from the various former States have been incorporated in this State and the standards differs in these prisons, there are different standards of administration, different standards of work and different standards in the carrying out of the various duties. There are different standards in the trades and avocations that are followed in these prisons.

So, this Government would have done better, had they appointed a Jail Reform Committee. After taking into consideration the report and recommendations of this Committee, the Government would have formed a new legislation for the Prisons in the State. But, that has not been done and we are simply depending on the old Acts. Sir, I may tell this House that I have experience of the Mysore Prisons, both as a prisoner as well as a visitor, but not as a visitor of the Jail Committee. I had opportunities to visit the various Jails in the State to meet our Satyagrahis in the border agitation. I was twice a prisoner in the Belgaum Central Prison, though for a short duration at every time. But, I have experience of the prison life. I was a political prisoner and all our Satyagrahis were political prisoners. They were treated as ordinary criminals. The Hon'ble acting Home Minister was pleased to say that they are not treated as criminal prisoners. That is not a fact they are treated as political prisoners.

11-30 A.M.

Mr. SPEAKER.—Acting Home Minister! Did the member appoint him as acting Home Minister?

Sri B. R. SUNTHANKAR.—Sir, while introducing the Bill, he admitted that he was acting for the Home Minister.

That is not the experience of ourselves, but of other parties also, that all these political prisoners are treated as criminal prisoners. That should not be. For, political prisoners, as suggested by the Hon'ble the Leader of the Opposition, there should be a separate class.

Sri B. D. JATTI.—If you see page 22, there it is mentioned. That provision is there. Perhaps the Leader of the Opposition had no time to read. That is why he suggested.

Sri S. SIVAPPA.—Then, why should it not be incorporated in the Act ?

Sri B. D. JATTI.—When the provision is there, it is possible.

Sri S. SIVAPPA.—The provision is there as "at your discretion." We don't want to be beggars at your door.

Sri B. R. SUNTHANKAR.—There are the classifications in the Bombay and there are only two classes of prisoners. That does not prevent the Government or Jail authorities from treating political prisoners as criminals. We are not asking for a favour. Political prisoners are prisoners who undergo imprisonment for certain ideas and ideals. They are not like criminal prisoners. In order to keep the dignity of the political life of the country, they should be given a special status. It is very necessary. If you want to raise the standard of the political life, they should be treated as political prisoners and not as criminals.

I had an opportunity to observe these prisons from close quarters and would like to make certain observations. There is inadequacy in the State of trained and qualified Jail staff, Jail duties require certain qualifications, certain training. Sir, we find that Revenue Officers were appointed in the Belgaum Prison as Jailors or Jail officers. What experience a Revenue officer has got about the Jail affairs ? Because he had no experience, he was funky and so wanted to get rid of the job as early as possible. For the Borstal Institute at Dharwar, for several months there was no Principal. The Superintendent of the Belgaum Jail was working both as Principal of the Borstal Institute, Dharwar, and as Superintendent of the Belgaum Jail. For some days in a week he was working at Belgaum and for the rest of days at Dharwar, with the result that the work of both the institutions suffered. That should not happen. Government should see that all the Prisons and Institutes like Borstal Institute, should have trained, qualified and adequate staff. That is very essential. Chapters II and III deal with the 'maintenance and officers of Prisons' and 'duties of officers' respectively. For these officers to carry out their work successfully and efficiently, necessary and requisite qualifications and training are quite essential. So, I would suggest to the Government to see that adequate, trained and qulified staff is posted at all these Jails. For the Jail administration a particular type of people are required; not all sorts of people can work efficiently as Jail authorities. So suitable persons will have to be selected for this work. Care will have to be taken at the time of selection. If sadistic types of persons are there as Jail authorities, that would defeat the very purpose and the objective of the prisons. Similarly, one thing that we observe, about which we have experience, is this. Politics plays a part even in the Jail administration. Particularly, in the Belgaum Central Prison, I found the difference of treatment that was given to us as well as in other prisoners. I had an opportunity to see the Gulbarga Jail, Bellary Jail and Bangalore Jail.

AN HON'BLE MEMBER.—As what ?

Sri B. R. SUNTHANKAR.—As a visitor. The treatment that was meted out to me at Belgaum even as a Member of this august House cannot be said to be good or deserving, because politics plays a part there. The language controversy has permeated in the services also. We find that in the Belgaum Central Prison, the Jail authorities were afraid of Kannada bosses of the local Congress. They were treating us very badly because they were afraid that their Kannada bosses would complain to the authorities and to the Ministers that they were showing lenient treatment to the Satyagrahi prisoners.

So, Sir, the Jail authorities were afraid and very much afraid. Well, Sir, I was treated very well as a visitor at Gulbarga and Bellary Jail. But I had always to wait one furlong from the gate of the Jail and I was made to stand and to stand for a long time, sometimes hours together, if I had to get a visit. That was the treatment that was meted out in the Belgaum prison because politics played a part there. Sir, there should never be any political interference in the Jail administration. The Jail authorities should be free from all the political influences.

Sir, as I already said, the jails in this State have different standards and different types and different regulations prevail; there are different types of vocations and different types of crafts. So there is no uniformity. It is expected, Sir, that after the passing of this Bill, the Government would try to bring all the Jails to one level.

Sir, the prisons in Bombay—in the former Bombay area—have got certain standards. They have been also following certain principles. They are set up on the model of the Borstal principles, but in the other prisons that is not the case. So, there is the necessity of upgrading the other prisons in the State. Similarly, Sir, a variety of crafts and trades will have to be provided. There should be a variety of those crafts and trades. Sir, what I found in the Gulbarga Jail was surprising and I was sorry also. There are very skilled instructors—handicraft instructors, particularly instructors in carpet-making. They are very skilled in making very beautiful and artistic designs of the carpets there. But I found that instructors in carpet making are paid very low. They do not get even salaries which are paid to peons. In order to encourage these crafts and trades and vocations, their salaries should be increased.

Mr. SPEAKER.—There is a separate Bill with regard to that. This Bill refers only to prisons. No doubt they are also associate matters. There is a separate Bill for that subject. That will be taken up immediately after this.

Sri B. R. SUNTHANKAR.—But I do not think that Bill refers to this, Sir.

Mr. SPEAKER.—They are associate matters no doubt. It would be worthwhile for the Hon'ble Member to confine himself to the merits of the present Bill.

Sri B. R SUNTHANKAR.—Then, Sir, about Jail administration. There again I think there is not sufficient check or supervision on some of the Jails. Sir, I may quote here the instance of Chikmagalur Jail,

(Sri B. R. Sunthankar)

some years back it came out, that the criminal convicts, convicted of various offences were kept in that prison and some of these convicts were allowed to skip out and escape from the precincts of the Jail; and they used to go to distances of 20, 30 or 40 miles, commit offences of theft and burglary and used to return to the Jail before dawn. They were in league with some of the Members of the staff of the Jail. That matter came out and prosecutions were conducted and some were convicted. That shows, Sir, there is lack of supervision and check on the Jails administrative staff. It was very surprising that criminal convicts from Chikmagalur Jail should be able to come out at night and commit burglaries. That clearly shows that some Members of the staff were in league with them and therefore they were allowed to go out and commit offences of burglaries outside and return before morning to the jail. That was, according to our information, a regular feature in that Jail. That speaks very badly of the check and supervision over jail administration. It is certainly a discredit to the jail administration of the State.

Then, Sir, in this Bill, there is no classification of prisons mentioned. I think there are the central prisons, the district jails, the subsidiary jails. Nothing of the kind is mentioned here. There is no mention of the Central Prison. No classification as such anywhere we find in this Bill. What is meant by Central Prison, what is its jurisdiction, what are the duties and what are the functions,-nothing is mentioned. What are the functions of the district jail and what are subsidiary jails. No mention is there. It has been mentioned in clause 2 item (3) (j):

> "any place which has been declared by the State Government by general or special order to be a subsidiary Jail:"

That phrase 'subsidiary jail' will be excluded from prisons. Subsidiary jail will not be treated as prisons and whom they are going to place there, and in whose hands it remains, nobody knows. Naturally they will be placed at the hands of the police. That is the inference. It is not clear; if the subsidiary jails are placed at the hands of the police, then Sir, woe be to it and to the persons sent there the under-trial prisoners. So this should be deleted, Sir. The subsidiary jails should also be considered as prisons and should be given the authorities and powers applicable to a prison.

Then Sir, one bad system that we find in the Jail is the spy system. There is a system prevailing now, the system of spying. There are spies on prisoners and the number of such spies work in the jail.

Sri C. J. MUCKANNAPPA.—Who appoints them ?

Sri B. R. SUNTHANKAR. They are not appointed officially, but unofficially appointed by the Jail authorities. That vitiates the whole atmosphere of the Jail. There are spies

on every prisoner and there are spies on spies. This spy system should be immediately abolished. These spies are given certain facilities. Usually they are the pet and favourites of the jail authorities and that has given rise to a bad psychological atmosphere in the jail. Every prisoner is haunted with a suspicion whether there are spies on him; whether his movements are being watched, whether his conversation and his speech is being watched. That sort of suspicion haunts every prisoner and that vitiates the whole atmosphere of jail life. I very strongly urge that this spy system should be immediately abolished.

Sir, in this Bill, there is no indication that it will bring out any change in the old pattern. The machinery is old, beuractatic one, the same as it was from the beginning. And there is no hope for the change for the better in the old pattern of jails.

After coming out of the prisons, these prisoners are found to become or turned into habitual offenders. Now they are appointing liaison officers in Central Prisons. Their task is to interview the prisoners before their release with a view to helping them to get rehabilitated after release. According to the reports that are provided by Government, it is found that this scheme has not proved a success; it has failed; it has not fulfilled the expectations. They are going to appoint some more liaison officers. The liaison officers are also not trained for the purpose; they are untrained, unqualified persons. That is one of the reasons why the scheme of appointing these officers has failed. As a matter of fact, there should be a system of follow up after the convicts are released; they should be watched, they should be assisted. The follow-up system, if adopted, will guide us in reforming the jails.

About diet: The usual experience is that diet remains on paper—the quantity as well as the quality. Whatever is supplied to the prisoners is never according to the standard, according to the terms of contract. The diet is supplied on a contract system and it is well known what the contractors do. My Hon'ble friend Sri Kadam says that all this goes to the Superintendent's house. Not even 25 or 30 per cent of the quality as well as the quantity reach the prisoners. There is pilferage. There should be a strict check, strict supervision about diet. There have been certain reforms in jails during recent years. When the Congress party came to power, one of the first things they introduced was jail reform. They had their own bitter experience during the British regime. New provisions about temporary release and parole are made. The reform will have to be carried further, and this brings me to the point that if we have to carry on further progress in jail reforms, what are the purposes to be kept in view ? The accepted purposes that you find in all the prison literature are: One, to carry out the sentence of the court and to administer punishment to the individual; 2 to deter others from crime and 3, to rehabilitate the individual prisoner and thus prevent this recidivating. We have not only to meet out punishment, not only to carry out the punishment given by the court but to rehabilitate the individual prisoner and to see that after discharge from the prison...

Mr. SPEAKER.—Help to the prisoner discharged from jail is a social problem. It is not to be provided in this Bill.

Sri B. R. SUNTHANKAR.—I am not speaking about that. In the recent times, throughout the world, the punitive approach is substituted by educational approach; that is the most important factor in jail reform. The idea is, through punishment man can be better, man can improve himself. So, to achieve that purpose, punishment meted out is to be helpful and constructive in his future life. There is nothing in this Bill which would assure us that this very important purpose and object of the prison life will be fulfilled by the prison administration in the State.

About the Medical Officer: One thing is not clear to me from this Bill. I do not know what is the system prevailing in other parts, but in the former Bombay area, the medical officers were drawn from the Medical Department; they were under the Civil Surgeon of District Hospital. For example, the Medical Officer in the Belgaum Central prison was an Assistant Surgeon or was an officer subordinate to the Civil Surgeon of the Belgaum Hospital. That system should be continued. It is not clear whether the Medical Officer or subordinate Medical Officer will be drawn from the medical services in State or he will be a person belonging to the Prisons Department itself. That Medical Officer be drawn from the Medical Department is a very good system; that should not be abandoned. He should not be under the control of the jail authority and he should not be a part of the jail administration. Otherwise, that would cause unnecessary hardship to the prisoners.

12-00 NOON.

Then, there is a provision about the report of the death of a prisoner. The Jailor will have to inform the authorities about the death of a prisoner. But, there is no provision that the nearest relatives of the prisoners shall be informed. A provision for this should be made. It was our experience that in one or two instances, the poor family members of the deceased prisoner got the information several hours after the death of the prisoner. So, it should be made obligatory that the nearest relatives of the deceased prisoner should be immediately informed. Then, Sir, the gist of the death report should also be forwarded to the relatives so that they may have no doubts about the death.

Under clause 46, the punishment for offences is separate confinement for a period not exceeding two months. I suggest that it should be one month. The period of confinement for one time should be one week and not a fortnight. Punishment under clause 53 is one year; it should be made six months. Clause 54 refers to cowardice. Sir, it is very difficult to determine cowardice. That will depend upon the circumstances. But, my doubt is how and who is going to determine this cowardice. It is something mystifying. Personally, I would like that 54 (*e*) is deleted.

The other provisions are sufficient and comprehensive and (e) may be deleted. Suppose a higher officer has any grudge against his subordinate officer. He may make use of this clause. So, scope should not be given to such ambiguous things.

Then, Sir, about confinement in iron is considered to be outmoled in these modern days. It should be abolished. If it is not possible, this should be used for the minimum time possible. Otherwise, it is found that this is used to take revenge against the prisoners. We had bad experience of this in the case of our satyagrahi prisoners. While they were taken to the courts, they were hand-cuffed. At times we had to approach the Superintendent of Police and some times the courts to request for the removal of the iron cuffs. In order to take revenge against certain prisoners, the confinement in iron is adopted. That should not be the case.

Sir, with regard to power to make rules, I refer to (y). I do not know what is prevailing in other parts of the State, but in the case of Belgaum prison there is a Committee of visitors. All the Members of the Legislature of that District are appointed as Members of that Committee in turns. Sir, our experience is, I have been here as a Member of the Legislature for the last nearly seven years, but I had no opportunity to be a member of that Jail Committee. Because the system is, all the members of this House in the district are informed that such and such committee is to be appointed and the members should give in their names. If members fail to give in their names before a certain date, then lots would be drawn and the selection of members would depend on the lot. So, every year 4 or 5 members of this House are to be elected. But, during the last 7 years, we have found that the same members are being elected year after year and some members do not get a chance at all to serve on that Committee. So, there should be some provision in the rules so that every Member will have a chance to serve on that Committee. We are 17 members and we never come together to suggest names. According to rules, lots are to be drawn and some members do not get a chance at all. In order that every member should come in contact with the Jail administration, there should be a rotation. So, Government should make provisions in the rules to see that every member will have a chance to serve on that Committee.

With these observations and with the hope that the Jail administration would improve in the State after this uniformity is brought in, I conclude.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ಬಂದೀಖಾನೆಗಳಿಗೆ ಸಂಬಂಧಪಟ್ಟ ಮಸೂದೆಯ ಮೇಲೆ ನಾವು ಚರ್ಚೆ ಮಾಡುತ್ತಾ ಇದ್ದೇವೆ. ಈ ಮಸೂದೆಯ ಧ್ಯೇಯ ಉದ್ದೇಶಗಳಲ್ಲಿ ಇನ್ನೇನನ್ನೂ ಕೇಳದೆ ಪ್ರತಿಯೊಂದೂ ಸಮನಾಗಿ ಇರಬೇಕು, 5 ಭಾಗಗಳ ರಾಜ್ಯ ಕಾನೂನುಗಳನ್ನು ಒಟ್ಟುಗೂಡಿಸಿ ಒಂದು ಏಕಮಾತ್ರ ಸ್ವರೂಪದ ಕಾನೂನನ್ನು ಮಾಡಬೇಕೆಂದು ಹೇಳಿ ನಮ್ಮ ಮುಂದೆ ಈ ಮಸೂದೆಯನ್ನು ಇಟ್ಟಿದ್ದೀರಿ. ಇದರಲ್ಲಿ 68 ವಿಧಿಗಳು ಇವೆ. ಈ 68 ವಿಧಿಗಳಲ್ಲಿ ಎರಡು ಅಥವಾ ಮೂರನ್ನು ಬಿಟ್ಟರೆ ಉಳಿದುದರಲ್ಲಿ ಏನೂ ಉಪ್ಪು ಹುಳಿ ಇಲ್ಲ. ಏಕೆ ಹೇಳುತ್ತೇನೆ ಎಂದರೆ ಜೈಲು ಹೇಗಿರಬೇಕು, ಜೈಲಿನ ಅಡಳಿತ ಹೇಗಿರಬೇಕು ಬಂದೀಖಾನೆಯಲ್ಲಿರತಕ್ಕ ಜನರನ್ನು ಹೇಗೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕಾಣಬೇಕು, ಅವರಿಗೆ ಯಾವ ರೀತಿ ರಕ್ಷಣೆ ಕೊಡಬೇಕೆನ್ನುವುದನ್ನು ತಾವು ತಿಳಿದುಕೊಂಡಿದ್ದೀರಾ? ಯಾವತ್ತಾದರೂ ತಾವು ಬಂದೀಖಾನೆಗೆ ಹೋಗಿದ್ದಿರಾ? ಅಲ್ಲಿ ಪಡೆಯತಕ್ಕ ಅನುಭವ ಪಡೆದಿದ್ದೀರಾ? ಅನುಭವ ಪಡೆದು ಅದರ ಸ್ವರೂಪ ಬದಲಾವಣೆ ಮಾಡಲು ಇದನ್ನು ತರುತ್ತಾ ಇದ್ದೀರಾ? ನಿಮ್ಮಲ್ಲಿ ಎಷ್ಟು ಜನ ಜೈಲುವಾಸ ಅನುಭವಿಸಿದವರು ಇದ್ದೀರಾ? ಜೈಲುವಾಸ ಅನುಭವಿಸಿದವರು ಯಾರೂ ಇದರಲ್ಲಿ ತರೆ ಹಾಕಿಲ್ಲ ಎಂದು ನನಗೆ ಅನಿಸುತ್ತದೆ. ಈ ಬಂದೀಖಾನೆ ಯಾರ ಅಧೀನದಲ್ಲಿದೆ ಅವರು ಯಾವತ್ತೂ ಜೈಲಿಗೆ ಹೋದವರಲ್ಲ. ಈ ಮಸೂದೆಯನ್ನು ಪ್ಲೈಟ್ ಮಾಡಿದವರು ಜೈಲನ್ನು ಕಂಡವರಲ್ಲ. ಅಂತಹವರು ಇವತ್ತು ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದಿಟ್ಟು ಚರ್ಚೆಮಾಡಿ ಇದರಲ್ಲಿ ದೋಷದೋಷ ಏನಿದೆ, ಏನು ಮಾರ್ಪಾಡಾಗಬೇಕೆಂದು ಕೇಳಿದರೆ ಕವುಡನ ಮುಂದೆ ಕಿನ್ನರಿ ಬಾರಿಸಿದ ಹಾಗಾಗುತ್ತದೆ. ಅದು ಅವನ ಕಿವಿಗೆ ಹೋಗುತ್ತದೆಯೇ? ಈ ಮಸೂದೆಯಲ್ಲಿರತಕ್ಕ ಒಂದು ಅಂಶವನ್ನಾದರೂ ತಾವು ನೋಡಿದ್ದೀರಾ? ತಮ್ಮ ಪಾರ್ಟಿಯಲ್ಲಾದರೂ ಚರ್ಚೆ ಮಾಡಿದ್ದೀರಾ ಎಂದು ಕೇಳುತ್ತಾ ಇದ್ದೇನೆ. ಶ್ರೀಮಾನ್ ಜತ್ತಿಯವರಾಗಲೀ ಶ್ರೀಮಾನ್ ಆರ್. ಎಂ. ಪಾಟೀಲ್‌ರವರಾಗಲೀ ಯಾವತ್ತೂ ಕೂಡ ಬಂದೀಖಾನೆಗೆ ಹೋದವರಲ್ಲ, ಬಂದೀಖಾನೆಯಲ್ಲಿರತಕ್ಕ ಕಷ್ಟ ಕಂಡವರಲ್ಲ. ಅದೃಷ್ಟವಶಾತ್ ಇವತ್ತಿನ ದಿವಸ ನೀವು ದೊಡ್ಡ ದೊಡ್ಡ ಪದವಿಗಳಿಗೆ ಏರಿದ್ದೀರಿ, ಇದು ನಿಮ್ಮ ಪುಣ್ಯವೋ ನಿಮ್ಮ ತಂದೆತಾಯಿಗಳ ಪುಣ್ಯವೋ ಅಥವಾ ದೇಶದ ದೌರ್ಭಾಗ್ಯವೋ ತಿಳಿಯದು.

ಏಕೆ ಹೇಳುತ್ತೇನೆ ಎಂದರೆ ಜೈಲಿನಲ್ಲಿ ಅವರಿಗೆ ಕೊಡತಕ್ಕ ಮಡಕೆ, ಊಟಕ್ಕೆ ತಾಟು, ಹೊದೆಯುವುದಕ್ಕೆ ಪೋಟು ಕಂಬಳಿ, ಗಾರೆ ನೆಲದ ಮೇಲೆ ಬಿಸಿಲು ಊಟ ಮಾಡತಕ್ಕ ಅನುಭವ ನೀವು ಅನುಭವಿಸಿದ್ದರೆ, ಅಲ್ಲಿ ಆಗತಕ್ಕ ವಿದ್ಯಮಾನಗಳನ್ನು ಸ್ವತಃ ಅನುಭವಿಸಿದ್ದರೆ, ಯಾವ ಸುಧಾರಣೆ ಜೈಲಿನಲ್ಲಿ ಆಗಿದೆ ಯಾವ ಸುಧಾರಣೆ ಆಗಬೇಕಾಗಿದೆ ಎಂಬುದು ನಿಮಗೆ ಗೊತ್ತಾಗುತ್ತಿತ್ತು. ಫ್ಯೂನೂರಿನದು ಅಷ್ಟು, ಕೊಡಗಿನದು ಅಷ್ಟು, ಹೈದರಾಬಾದಿನದು ಅಷ್ಟು, ಬೊಂಬಾಯಿಯದು ಅಷ್ಟು ಈ ರೀತಿ ಅದರಲ್ಲಿನದು ನಾಲ್ಕು ಇದರಲ್ಲಿನದು ನಾಲ್ಕು ಸೇರಿಸಿ ಬಂದೀಖಾನೆಗಳ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದೀರಿ. ನಾನಾದರೂ ಹೇಳುತ್ತೇನೆ, ಸ್ವಾಮಿ ಈ ರಾಜ್ಯದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆಯುತ್ತಾ ಇದ್ದಾಗ ಜೈಲಿಗೆ ಹೋದಂಥಾ ಅನೇಕ ಜನ ಇವತ್ತು ಅಧಿಕಾರಕ್ಕೆ ಬಂದಿದ್ದಾರೆ. ಆಗ ಅವರಿಗೆ ಏನು ಕಷ್ಟಕೊಟ್ಟರು ಎಂಬುದನ್ನು ಹೇಳುತ್ತೇನೆ. ಅವರಿಗೆ ಏನು ಹಿಂಸೆ ಮಾಡಿದರು ಎಂಬುದು ಇವರಿಗೆ ಗೊತ್ತಿದೆಯೇನು? ಒಂದು ಉದಾಹರಣೆ ಹೇಳುತ್ತೇನೆ ದಿವಂಗತರಾದ ಶ್ರೀಮಾನ್ ಸಿದ್ದಯ್ಯನವರು ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಬೇಕು ಎಂದು ಹೋರಾಟ ಮಾಡಿದಾಗ ಅವರನ್ನು ಜೈಲಿನಲ್ಲಿ ಇಟ್ಟರು. ಜೈಲಿನಲ್ಲಿ ಇಟ್ಟು ಅವರ ಕೈಯಲ್ಲಿ ರಾಗಿಯನ್ನು ಬೀಸಿಸಿದರು. ರಾಗಿ ಬೀಸಿದಾಗ ಅವರ ಕೈಯಲ್ಲಿ ಎದ್ದ ಬೊಬ್ಬೆಯನ್ನು ನೋಡಿದ್ದರೆ ಬಂದೀಖಾನೆ ಹೇಗಿರಬೇಕು ಎಂಬುದು ಗೊತ್ತಾಗುತ್ತಿತ್ತು. ಇವತ್ತಿನ ದಿವಸ ಬಂದೀಖಾನೆಯ ಮುಖ ನೋಡದ ಹಣಕಾಸಿನ ಸಚಿವರು ಆ ದೃಶ್ಯ ನೆನೆಸಿಕೊಂಡಿದ್ದರೆ ಇಂಥಾ ಮಸೂದೆಯನ್ನು ನಮ್ಮ ಮುಂದಿಟ್ಟು ಚರ್ಚೆ ಮಾಡಿಸುತ್ತಾ ಇರಲಿಲ್ಲ. ಇವತ್ತು ಕಣ್ಮರೆಯಾಗಿರತಕ್ಕ ಶ್ರೀಮಾನ್ ಕೆ. ಟಿ. ಭಾಷ್ಯಂ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ನೇಮಕವಾಗಿ ಮೈಸೂರು ರಾಜ್ಯದಲ್ಲಿ ಜೈಲುಗಳು ಹೇಗಿರಬೇಕು ಎಂಬ ವಿಷಯದಲ್ಲಿ ಅವರು ಒಂದು ವರದಿಯನ್ನು ಕೊಟ್ಟರು. ಅದರಲ್ಲಿ ಅಡಕವಾಗಿರತಕ್ಕ ಒಂದು ಅಂಶವೂ ಕೂಡ ಈ 68 ಕ್ಲಾಸ್‌ಗಳಲ್ಲಿ ಇಲ್ಲ, ಹತ್ತು ದಿನ ಪೇರೋಲ್ ಮೇಲೆ ಬಿಡತಕ್ಕ ಒಂದು ಅಂಶವನ್ನು ಬಿಟ್ಟರೆ. ಶ್ರೀಮಾನ್ ಟಿ. ಮಾದಯ್ಯಗೌಡರು ಏನೋ ಹೇಳಿದರು ಈ ಜೈಲುಗಳು ಸ್ವರ್ಗದಂತೆ ಇವೆ, ಬಿಡುಗಡೆಯಾದ ಮೇಲೆ ಮತ್ತೆ ಪಂಚರಂಗಿಗಳು ತಾವು ಅಲ್ಲಗೇ ಹೋಗಬೇಕೆಂದು ಬಯಸುತ್ತಾರೆ ಎಂದು. ಈ ರೀತಿ ಹೇಳುವುದನ್ನು ಯಾರಾದರೂ ಕೇಳಿದ್ದೀರಾ? ಹೃದಯ ಮುಟ್ಟಿ ಹೇಳುತ್ತೇನೆ ಪಂಚರಂಗಿಗಳು ಎಂದರೆ ಒಂದು ಸಾರಿಗಿಂತ ಹೆಚ್ಚು ಶಿಕ್ಷೆ ಆಗಿರತಕ್ಕವರಿಗೆ ಪಂಚರಂಗಿಗಳು ಎಂದು ಹೇಳುತ್ತಾರೆ ಬಣ್ಣ ಹಾಕಿದ ಜೋಪಿ, ಬಣ್ಣ ಹಾಕಿದ ಅಂಗಿ ಅವನಿಗೆ ಕೊಟ್ಟಿರುತ್ತಾರೆ, ಶ್ರೀಮಾನ್ ಮಾದಯ್ಯ ಗೌಡರು ದೇಶಕ್ಕೆ ಹೋರಾಟ ಮಾಡಿ ಬಂದೀಖಾನೆಯಲ್ಲಿ ಇದ್ದು ಅವರು ಕೊಟ್ಟ ತಟ್ಟೆಯಲ್ಲಿ ಊಟ ಮಾಡಿ ಹುಳಿ ಉಪ್ಪು ಇಲ್ಲದ ಆಹಾರ ತಿಂದು ಬಂದರಲ್ಲಾ ಅವರನ್ನು ಪ್ರಶ್ನೆ ಮಾಡುತ್ತೇನೆ ಯಾವ ಪಂಚರಂಗಿ 'ನಾನು ಇಲ್ಲೇ ಇರುತ್ತೇನೆ; ಇದೇ ಬಹಳ ಚೆನ್ನಾಗಿದೆ' ಎಂದು ಹೇಳಿದ್ದಾನೆ? ಈ ಮಾತು ಅವರಿಂದ ಬಂದದ್ದು ದೇಶದ ದುರ್ದೈವ. ಇಂಗ್ಲಿಷ್‌ನವರು ಇದ್ದಾಗ ಮಾಡಿಕೊಟ್ಟಂಥ ಏರ್ಪಾಡೇ ಇವತ್ತೂ ಇದೆ. ಶ್ರೀಮಾನ್ ಭಾಷ್ಯಂ ಅವರು ಕೊಟ್ಟ ವರದಿಯ ಪ್ರಕಾರ ಇದರಲ್ಲಿ ಯಾವ ಅಂಶವನ್ನು ಸೇರಿಸಿದ್ದೀರಿ? ಆ ಬಗ್ಗೆ ಇದರಲ್ಲಿ ಒಂದು ಅಕ್ಷರ ಬೇಡವೆ? ಅದರಲ್ಲಿ ಯಾವ ಪ್ಯಾರಾ ಸೇರಿಸಿದ್ದೀರಿ ಎಂಬುದನ್ನು ಹೇಳಬೇಡವೇ? ಮೂರು ವರ್ಷಗಳಿಂದ ಜೈಲು

ಅವರ ಸ್ವಾಧೀನದಲ್ಲಿತ್ತು ಅವರು ಯಾವತ್ತಾದರೂ ಹೋಗಿದ್ದರೇ? ತಾಟಿನಲ್ಲಿ ಊಟ ಮಾಡಿದ್ದಾರೆಯೇ ? ಹೋಗಿ ವಾಸ ಮಾಡಿದ್ದಾರೆಯೇ ? ತಂಗಳು ಅನ್ನ, ತಂಗಳು ಸಾರು, ಅಂಬಲಿ ಗಂಜಿ ಕುಡಿದಿದ್ದಾರೆಯೇ? ಮೋಟು ಕಂಬಳಿ ಹೊದ್ದುಕೊಂಡು ಮಲಗಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೇ ನಾನು ಹೇಳುತ್ತಾ ಇರುವುದು ನಿಮ್ಮ ಪುಣ್ಯ, ನಿಮ್ಮ ತಂದೆತಾಯಿಗಳ ಪುಣ್ಯ, ನೀವು ದೇಶದ ಮುಖ್ಯ ಮಂತ್ರಿಗಳಾಗಿದ್ದಿರಿ, ಈಗ ಹಣಕಾಸಿನ ಮಂತ್ರಿಗಳಾಗಿದ್ದೀರಿ. ನಿಮ್ಮ ಪಾಲಿಗೆ ಬಂದದ್ದನ್ನು ನೀವು ಅನುಭವಿಸುತ್ತಾ ಇದ್ದೀರಿ. ಅದಕ್ಕಾಗಿ ನಮಗೆ ಹೊಟ್ಟೆಕಿಚ್ಚು ಇಲ್ಲ. ಆದರೆ ಈ ಮನೂದೆಯಲ್ಲಿ ಒಳ್ಳೆಯದನ್ನು ಯಾವುದೂ ಮಾಡಲಿಲ್ಲವಲ್ಲಾ ಎಂದು ಮಾತ್ರ ನಮಗೆ ವ್ಯಸನವಾಗುತ್ತಾ ಇದೆ, ಅಷ್ಟೆ. ಕೆ. ಟಿ. ಭಾಷ್ಯಂ ಅವರು ಕೊಟ್ಟಿರತಕ್ಕ ಜೈಲ್ ರಿಫಾರಂಸ್ ಸಮಿತಿ ಅವರ ವರದಿಯನ್ನು ಓದಿ ನೋಡಿ. ಗೃಹ ಸಚಿವರೂ ಯಾವತ್ತೂ ಬಂದೀಖಾನೆಗೆ ಹೋದವರಲ್ಲ, ಅಲ್ಲಿ ಯಾವ ಪರಿಸ್ಥಿತಿ ಇದೆ ಎಂಬುದನ್ನು ಸ್ವತಃ ಅನುಭವಿಸಿದವರಲ್ಲ, ಎಂದ ಮೇಲೆ ಇವರಿಬ್ಬರೂ ತಿಳಿಯದೇ ಇರತಕ್ಕವರು ಜೈಲಿನಲ್ಲಿದ್ದು ಕಷ್ಟಪಟ್ಟವರಲ್ಲ. ಶ್ರೀಮಾನ್ ಹುಚ್ಚ ಮಾಸ್ತಿ ಗೌಡರಂಥವರು, ಶ್ರೀಮಾನ್ ನಿಜಲಿಂಗಪ್ಪನವರು ಈ ಕೆಲಸ ಮಾಡಿದ್ದರೆ ಜೈಲಿನಲ್ಲಿ ಕಷ್ಟ ಏನಿದೆ ಎಂಬುದು ಅವರಿಗೆ ಗೊತ್ತಿತ್ತು. ಅವರಿಗೆ ಈ ಮನೂದೆಯನ್ನು ಮಂಡಿಸುವುದರ ಕಷ್ಟ ಗೊತ್ತಾಗುತ್ತಿತ್ತು. ಒಂದು ಹರಳು ಉಪ್ಪು, ಎರಡು ನೀರುಳ್ಳಿ ಕೊಟ್ಟದ್ದನ್ನು ಎಷ್ಟು ಭದ್ರವಾಗಿ ಜೋಪಾನ ಮಾಡುತ್ತಿದ್ದರು ಎಂದರೆ ಅದೇ ಸರ್ವಸ್ವ ವಸ್ತು, ಬಹಳ ಶ್ರೇಷ್ಠವಾದ ಬೆಲೆ ಬಾಳತಕ್ಕ ವಸ್ತು ಎಂಬ ರೀತಿಯಲ್ಲಿ ಭಾವನೆ ಮಾಡಿಕೊಂಡು ಅದನ್ನು ಸೊಂಟದಲ್ಲಿ ಇಟ್ಟುಕೊಳ್ಳುತ್ತಿದ್ದರು. ಇವತ್ತಿನ ದಿವಸ ಏನು ಮಾಡಿದ್ದೀರಿ ? ಅದನ್ನೇ ಮಕ್ಕೀಕಾ ಮಕ್ಕೀ ಹಿಂದೆ ಯಾವ ಪರಿಸ್ಥಿತಿ ಇತ್ತೋ ಅದನ್ನೇ ಉಳಿಸಿಕೊಂಡು ಬಂದು ಅದನ್ನೇ ಸುಧಾರಣೆ ಎಂದು ಕರೆದು, ಇದು ಬಹಳ ಚೆನ್ನಾಗಿದೆ ಇದನ್ನು ಒಪ್ಪಿಕೊಳ್ಳಿ, ಇದು ಬಹಳ ಸುಲಭವಾದುದ್ದು ಜೈಲಿನಲ್ಲೆಲ್ಲಾ ಸರಿಮಾಡಿದ್ದೇವೆ ಎಂದು ಹೇಳುತ್ತಾ ಇದ್ದೀರಿ. ಈ 68 ವಿಧಿಗಳಲ್ಲಿ ಬಂದೀಖಾನೆಯನ್ನು ಉತ್ತಮ ಪಡಿಸುವುದಕ್ಕೆ, ಬಂದೀಖಾನೆಯ ಆಡಳಿತವನ್ನು ಉತ್ತಮ ಪಡಿಸುವುದಕ್ಕೆ ಏನು ಮಾಡಿದ್ದೀರಿ ಎನ್ನತಕ್ಕಂಥ ಒಂದು ಕ್ಲಾಜ್‌ನ್ನಾದರೂ ತೋರಿಸಿಕೊಡಿ, ಚಕಾರ ಶಬ್ದ ಹೇಳುವುದಿಲ್ಲ, ಒಪ್ಪಿಕೊಂಡುಬಿಡುತ್ತೇವೆ. ಯಾರು ದೇಶ ಸ್ವಾತಂತ್ರ್ಯದಿಂದ ಇರಬೇಕೆಂದು ಅನೇಕ ಕಷ್ಟನಷ್ಟಗಳನ್ನು ಅನುಭವಿಸಿ ದುಡಿದರೋ ಅಂಥವರ ಕೈಗೆ ರಾಜ್ಯ ಸಿಕ್ಕಿದ್ದರೆ ಈ ಜೈಲುಗಳ ಸುಧಾರಣೆ ಚೆನ್ನಾಗಿ ಆಗುತ್ತಿತ್ತು. ಆದರೆ ಈ ದಿನ ಈ ಜೈಲು ಸುಧಾರಣೆ ಕಲ್ಲನಂಥ ಕಠೋರ ಹೃದಯವಿರತಕ್ಕವರ ಕೈಗೆ ಸಿಕ್ಕಿದೆ. ಹೀಗಿದ್ದರೂ ಶ್ರೀ ಮಾದಯ್ಯಗೌಡರು—ಅಲ್ಲಿ ಬೈರಾಟ ಮಾಡುತ್ತಾರೆ, ಭಜನೆ ಮಾಡುತ್ತಾರೆ, ಶಿವ ಕಥೆ ಮಾಡುತ್ತಾರೆ, ಪುರಾಣ ಹೇಳಿಸುತ್ತಾರೆ ಎಂದು ಏನೇನೋ ಹೇಳುತ್ತಿದ್ದಾರೆ. ಇವುಗಳನ್ನೆಲ್ಲಾ ಅಲ್ಲಿ ಮಾಡಿದರೆ ಜೈಲನ್ನು ಸುಧಾರಣೆ ಮಾಡಿದಂತಾಯಿತೆ ? ಸೆಲ್ ಎಂದರೆ ಏನು ಅರ್ಥ ? ಅದಕ್ಕೆ ಕಿಟಕಿಗಳೆಷ್ಟಿವೆ ? ಅಲ್ಲಿ ಗಾಳಿ ಬೆಳಕುಗಳಿವೆಯೇ ? ಅದರಲ್ಲಿ ಬಂದು ಉಳಿಯತಕ್ಕವನ ಪಾಡೇನಾಗ ಬೇಕು ? ಯಾರು ಜೈಲಿನ ಕಾನೂನುಗಳನ್ನು ಮೀರಿ ನಡೆಯುತ್ತಾನೋ ಅಂಥವನನ್ನು ಅಲ್ಲಡುತ್ತಾರೆ. ಹಿಂದೆ ಒಂದು ಸಾರಿ ಜೈಲಿನಲ್ಲಿ ಅಂದರೆ ಇಲ್ಲಿರತಕ್ಕ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ದೊಡ್ಡ ಗಲಾಟೆ ನಡೆಯಿತು. ಅಲ್ಲಿ ದೊಡ್ಡ [ಹೊಡೆದಾಟ ನಡೆದು ಅನೇಕರಿಗೆ ಬುರುಡೆಗಳಿಂದ ರಕ್ತ ಸುರಿಯುತ್ತಿತ್ತು. ಆಗ ಆ ಗುಂಪು ಒಂದು ರಾಜಕೀಯ ಆಂಥೋಳನಕ್ಕೆ ಸೇರಿದೆಯೆಂದು ಆ ದಿವಸ ನಮಗೆ ಮೆಡಿಕಲ್ ಎಯ್ಡನ್ನು ಕೊಡಿಸಲಿಲ್ಲ. ಈಗಲೂ ಆ ಹಿಂದಿನಂತೆಯೆ ಅಲ್ಲಿ ಗಲಾಟೆಗಳಾದರೆ ಮೆಡಿಕಲ್ ಎಯ್ಡನ್ನು ಕೊಡುವುದಿಲ್ಲ ಎಂದರೆ ಏನು ಗತಿ ? ಆ ದಿವಸ ಜೈಲಿನಲ್ಲಿ ಹೊಡದಾಟ ನಡೆದ ಆರು ಗಂಟೆಗಳನಂತರ ಡಾಕ್ಟರು ಸ್ಥಳಕ್ಕೆ ಬಂದರು. ನಾಳೆ ಹಾಗೇನಾದರೂ ನಡೆದರೆ ಏನು ಮಾಡುವುದು ಎಂಬುದರ ಬಗ್ಗೆ ಇದರಲ್ಲಿ ಏನಾದರೂ ಹೇಳಿದ್ದಾರೆಯೇ ? ಈ ದಿವಸ ಈ ಜೈಲುಗಳ ಕಾರ್ಯಾಚರಣೆ ಯಾರ ಕೈಯಲ್ಲಿದೆ ? ಈ ಅಧಿಕಾರ ಯಾರ ಕೈಯಲ್ಲಿದೆ ? ಆತನು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೆ ಹೋದರೆ ಆ ಹೊತ್ತಿನಲ್ಲಿ ಯಾರಿಗೆ ದೂರನ್ನು ಕೊಡಬೇಕು ? ಈ ದಿವಸ ಡೈರೆಕ್ಟರ್ ಆಫ್ ಪ್ರಿಜನ್ಸ್ ಯಾರು ? ಈ ದಿವಸ ಇದನ್ನೇ ಒಂದು ಪ್ರತ್ಯೇಕ ಇಲಾಖೆಯನ್ನಾಗಿ ಮಾಡಿದ್ದಾರೆ. ಕೆಲವರಿಗೆ ನೌಕರಿಗಳನ್ನು ಕೊಡಬೇಕೆಂಬ ಉದ್ದೇಶದಿಂದ ಇದನ್ನು ಒಂದು ಪ್ರತ್ಯೇಕ ಇಲಾಖೆಯನ್ನಾಗಿ ಮಾಡಿರುತ್ತಾರೆ. ಮೊದಲು ಇದರ ಮೇಲ್ವಿಚಾರಣೆ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸೆಸ್ ಅವರ ಕಡೆಗಿತ್ತು. ಹಿಂದೆ ಒಬ್ಬರು ಇರುತ್ತಿದ್ದಂಥ ಜಾಗದಲ್ಲಿ ಈಗ ಒಬ್ಬ ಇನ್‌ಸ್ಪೆಕ್ಟರ್ ಜನರಲ್ ಆಫ್ ಪ್ರಿಜನ್ಸ್ ಎಂದು ಒಬ್ಬರು, ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫ್ ಪ್ರಿಜನ್ಸ್ ಎಂದು ಒಬ್ಬರು, ಅನಂತರ ಜೈಲರ್, ಡೆಪ್ಯುಟಿ ಜೈಲರ್, ವಾರ್ಡರ್ಸ್ ಎಂದು ಅನೇಕರನ್ನು ಕೆಲಸಕ್ಕೆ ನೇಮಕ ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿದ ಮೇಲೆ ಈ ದಿವಸ ಆ ಜೈಲಿಗೆ ಬಂದಂಥ ಎಷ್ಟು ಜನರನ್ನು ಇವರು ರಿಫಾರಂ ಮಾಡಿದ್ದಾರೆ ? ಈ ಹಿಂದೆ ಕೆ. ಟಿ. ಭಾಷ್ಯಂ ಅವರ ಈ ವಿಚಾರದಲ್ಲಿ ಮಾಡಿರತಕ್ಕ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಭಾಷಣವನ್ನು ಕೇಳಿದ್ದವರು, ಈ ದಿವಸ ಶ್ರೀ ಮಾದಯ್ಯಗೌಡರು ಮಾಡಿದ ಭಾಷಣವನ್ನು ಕೇಳಿದರೆ ಇವರು ಸತ್ಯಕ್ಕೆ ವಿರೋಧವಾದ ಮಾತನ್ನಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಜೈಲಿನಲ್ಲಿ ಈಗ ಇವರು ಮಾಡಿರತಕ್ಕ ಚಡುರಂಗವಾಟ ನೋಡಿ, ಜನರು ಹೊರಗಡೆ ಕಷ್ಟಪಡುವುದಕ್ಕಿಂತ ಈ ಜೈಲಿನಲ್ಲಿರುವುದೇ ಲೇಸಾಗಿರುತ್ತದೆಂದು ಹೇಳುವಷ್ಟರ ಮಟ್ಟಿಗೆ ಈ ಜೈಲುಗಳ ಸುಧಾರಣೆ ಆಗಿದೆ ಎಂದು ಹೇಳತಕ್ಕ ಶ್ರೀ ಮಾಡೇಗೌಡರು ಆ ಜೈಲಿಗೆ ಮತ್ತೆ ಹೋಗಿ ಏಕೆ ಅಲ್ಲಿರಬಾರದು ? ಅವರು ಹೇಗೂ ಮಂತ್ರಿಗಳಾಗುವಹಾಗಿಲ್ಲ, ಇನ್ನೊಂದಾಗುವ ಹಾಗಿಲ್ಲ. ಅಲ್ಲಗಾದರೂ ಹೋಗಿ ಏಕೆ ಅವರು ಸುಖವಾಗಿರಬಾರದು ? ನಾವಾದರೂ ಇನ್ನೂ ಚಿಕ್ಕ ವಯಸ್ಸಿನವರು, ಬಿಸಿರಕ್ತ ಇರತಕ್ಕವರು. ನಮ್ಮಂಥವರು ಏನಾದರೂ ತಿಳಿವಳಿಕೆ ಇಲ್ಲದೆ ತಪ್ಪು ಮಾತನಾಡಿದ್ದರೆ ನಮ್ಮನ್ನು ತಿದ್ದಿ ಸರಿಯಾದ ಹಾದಿಗೆ ತಂದು ನೀವು ಜೈಲುಗಳನ್ನು ನೋಡಿಲ್ಲ, ಇದು ಹೀಗಲ್ಲ ಹೀಗೆ ಎಂದು ಹೇಳುವುದನ್ನು ಬಿಟ್ಟು ನಮ್ಮನ್ನು ಹೀಗೆ ಡಿರೈಲ್ ಆಗುವ ಹಾಗೆ ಮಾತನಾಡಿದ್ದಾರಲ್ಲಾ ಇದು ಸರಿಯೇ ? ಇಂಥ ಅರಿತುಬುರಿತವರೇ ಜೈಲುಗಳ ವ್ಯವಸ್ಥೆ ಚೆನ್ನಾಗಿದೆ ಎಂದು ಹೇಳುತ್ತಿರುವುದು ದೇಶದ ದುರದೃಷ್ಟ. ಪರಿಸ್ಥಿತಿ ಹೀಗಾದಮೇಲೆ ದೇಶಕ್ಕೆ ಒಳ್ಳೆಯದನ್ನು ಮಾಡಲು ಖಂಡಿತ ಸಾಧ್ಯವಿಲ್ಲ. ಸ್ವಾಮಿ, ಈ ದಿವಸ ದೇಶದಲ್ಲಿ ಏನಾದರೊಂದು ದೊಡ್ಡ ಆಂಧೋಲನ ನಡೆದರೆ, ಅಲ್ಲಿಂದ ಒಂದು ಸಾವಿರ ಜನರನ್ನು ಇಲ್ಲಿರತಕ್ಕ ಸೆಂಟ್ರಲ್ ಜೈಲಿಗೆ ತಂದರೆ ಅವರನ್ನು ಕುರಿಗಳನ್ನು ಕೂಡಿದ ಹಾಗೆ ಕೂಡಬೇಕು ಎಂದು ಹೇಳುತ್ತೀರಾ ? ಈ ದಿವಸ ಈ ಜೈಲಿನಲ್ಲಿ ಎಷ್ಟು ಸ್ಥಳಾವಕಾಶವಿದೆ, ಎಷ್ಟು ರೂಮುಗಳಿವೆ ? ಅದರ ಉದ್ದ ಮತ್ತು ಅಗಲವೆಷ್ಟು ? ಎಮರ್ಜನ್ಸಿ ಕಾಲಕ್ಕೆ ಹೆಂಪರೆರಿ ಅಕಾಮೊಡೇಷನ್ ಬಗ್ಗೆ ಇದರಲ್ಲಿ ಒಂದು ಚಕಾರ ಶಬ್ದವನ್ನೇನಾದರೂ ಹೇಳಿದ್ದಾರೆಯೆ ? ಎಷ್ಟು ಜನಗಳಿಗೆ ಎಷ್ಟು ಜಾಗ ಇರಬೇಕು ಎಂಬುದನ್ನು ಏನಾದರೂ ಹೇಳಿದ್ದಾರೆಯೇ ? ಈಗ ಆ ಸೆಂಟ್ರಲ್ ಜೈಲಿನ ನಿವೇಶನದಲ್ಲಿ ಅರ್ಧದಷ್ಟನ್ನು ಕಡಮೆ ಮಾಡಿದ್ದಾರೆ. ಹೀಗೆ ಕಡಮೆ ಮಾಡಿರುವುದರ ಅರ್ಧ ಬೆಂಗಳೂರು ಸೆಂಟ್ರಲ್ ಜೈಲಿಗೆ ಬರತಕ್ಕ ಖೈದಿಗಳ ಸಂಖ್ಯೆ ಕಡಮೆಯಾಗಿದೆ ಎಂಬುದೇ ? ಅಥವಾ ಇದನ್ನು ಇಲ್ಲಿಂದ ಬದಲಾಯಿಸಿ ಬೇರೆ ಕಡೆ ಕಟ್ಟಬೇಕೆಂದು ಮಾಡಿದ್ದಾರೋ ಅದು ನನಗೆ ಗೊತ್ತಾಗುತ್ತಿಲ್ಲ. ಈ ಕಾನೂನು ಮಾಡಿದಾಕ್ಷಣಕ್ಕೆ ಈ ಸಮಸ್ಯೆಗಳೆಲ್ಲ ಬಗೆಹರಿಯುತ್ತವೆ ಎಂದು ಹೇಳುವುದಕ್ಕೂ ಆಗುವುದಿಲ್ಲ. ಈಗೇನೋ ಈ ಮಸೂದೆಯನ್ನು ಪಾಸ್ ಮಾಡಿಸಿಕೊಳ್ಳುತ್ತಾರೆ. ಆದರೆ ಮತ್ತೆ ಯಾವಾಗ ಇದಕ್ಕೆ ಇವರು ತಿದ್ದುಪಡಿಯನ್ನು ತರುವುದು ? ಸರ್ಕಾರದವರ ಹಿಂದೆ ಬೇಕಾದಷ್ಟು ಜನಗಳಿದ್ದಾರೆ, ಅವರು ಏನು ತಂದರೂ ಪಾಸಾಗುತ್ತದೆ ಎಂಬ ಭರವಸೆ ಅವರಿಗಿದೆ. ಆದರೆ ನಾವು ಹೇಳತಕ್ಕದ್ದು ಇವರ ಕಿವಿಗೆ ಹೋಗಬೇಕಾಗಿದ್ದರೆ ಅದು ಯಾವ ಅಪರೇಟನ್ಸನ್ನು ಉಪಯೋಗಿಸಬೇಕೋ ಅಂಥ ಒಂದು ಅಪರೇಟನ್ಸನ್ನು ಆ ಆರೋಗ್ಯ ಮಂತ್ರಿಗಳು ನಮಗೆ ಒದಗಿಸಿದರೆ, ಆಗ ನಾವು ಹೇಳತಕ್ಕದ್ದು ಇವರ ಕಿವಿಗೆ ಹೋಗಬಹುದೆಂದು ಕಾಣುತ್ತದೆ. ಆದರೆ '' ಇವರ ಸ್ವಭಾವ ಯಾವಾಗಲೂ ಹೀಗೇನೆ, ಇವರು ಏನು ಬೇಕಾದರೂ ಹೇಳಿಕೊಳ್ಳಲಿ'', ಎಂದು ಹೇಳುವುದಾದರೆ ಅದಕ್ಕೂ ಸದ್ಯದಲ್ಲೇ ಒಂದು ಕಾಲ ಬರಬಹುದು. ಈ ಹಿಂದೆ ಒಂದಾನೊಂದು ಕಾಲದಲ್ಲಿ ಕಾಂಗ್ರೆಸ್ಸಿನವರು ಬೀದಿ ಬೀದಿಗಳಲ್ಲಿ ಅರಚುತ್ತಿದ್ದಾಗ, ಆಗಿದ್ದ ಸರ್ಕಾರದವರು ಇಂದು ಅಧಿಕಾರದಲ್ಲಿರತಕ್ಕ ಜನರಿಗೂ ಇದೇ ಶಬ್ದಗಳನ್ನು ಹೇಳುತ್ತಿದ್ದರು. ಈ ದಿವಸ ಈ ಕಡೆ ಕುಳಿತಿರುವ ಶ್ರೀ ಶಿವಪ್ಪನವರು ನಾಳೆ ಆ ಕಡೆ ಕುಳಿತುಕೊಂಡು ನಾಳೆ ನಿಮಗೂ ಇದೇ ಶಬ್ದಗಳನ್ನು ಅವರು ಹೇಳುವಂಥ ಕಾಲ ಬಹಳ ಸಮೀಪದಲ್ಲೇ ಇದೆ. ರಾಜ್ಯಭಾರ ನಡೆಸತಕ್ಕವರು ಬಜೆಟ್ಟಿನ ಪರಿಸ್ಥಿತಿಯನ್ನು ನೋಡಿಕೊಂಡು ಆಡಳಿತ ನಡೆಸುವಂತೆ, ಸಮಾಜದಲ್ಲಿರತಕ್ಕ ಏರುಪೇರುಗಳನ್ನು ಗಮನಿಸಿ, ಈ ಸಮಾಜವನ್ನು ಒಂದು ಸುಭದ್ರವಾದ ತಳಹದಿಯ ಮೇಲೆ ಕಟ್ಟಬೇಕು ಎಂದು ಹೇಳತಕ್ಕವರು ಸಮಾಜದಲ್ಲಿರತಕ್ಕ ದ್ರುಷ್ಟ ಶಕ್ತಿಗಳನ್ನು ಹಿಡಿದು ಮಟ್ಟಹಾಕಬೇಕು ಎಂದು ಹೇಳತಕ್ಕವರು ಮಾಡತಕ್ಕ ಕಾನೂನು ಹೀಗೇನೇನು ! ಈ ದಿವಸ ನಾವು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಒಂದು ಸಾವಿರ ಹೇಳುತ್ತೀರಿ. ಹೀಗೆ ಆ ಬಜೆಟ್ ಅಧಿವೇಶನದ ಕಾಲದಲ್ಲೂ ನಾವು ಆ ಕೆರೆ ಕಟ್ಟಿಸುತ್ತೇವೆ, ಈ ಕೋಡಿ ಕಟ್ಟಿಸುತ್ತೇವೆ, ರಸ್ತೆ ಮಾಡಿಸುತ್ತೇವೆ, ಎಂದು ಒಂದು ಸಾವಿರ ಹೇಳಿಬಿಡುತ್ತೀರಿ. ಮಾಡುವುದು ಮಾತ್ರ ಒಂದೂ ಇಲ್ಲ. ಇಲ್ಲಿ ಈ ದಿವಸ ಪ್ರಿಜನ್ ಎಂದರೇನು ಎಂಬುದಕ್ಕೆ ಒಂದು ಡೆಫಿನಿಷನ್ ಇಲ್ಲ. ಇದರಲ್ಲಿ ಯಾರನ್ನಿಡುವುದು ಎಂಬುದನ್ನೂ ಖಚಿತವಾಗಿ ಹೇಳಿಲ್ಲ. ಈ ಹ್ಯಾಂಡ್ ಕಫ್ಸ್‌ನ್ನು ಯಾರಿಗೆ ಯಾವಾಗ ಹಾಕಬೇಕು ಎಂಬುದನ್ನೂ ಇಲ್ಲಿ ಹೇಳಿಲ್ಲ. ಇಲ್ಲಿ ತಾವು ಹೇಳಿರತಕ್ಕದ್ದು ಬಹಳ ಮೊಗುಂ ಆಗಿದೆ ಎಂದು ತಮಗೆ ತಿಳಿಸಲಿಚ್ಛಿಸುತ್ತೇನೆ. ನಾನು ಇಲ್ಲಿಯವರೆಗೂ ಕೇವಲ ಅಧ್ಯಾಹಾರ ರೂಪದಲ್ಲಿ ಕೆಲವು ವಿಚಾರಗಳನ್ನು ಮಾತ್ರ ಜನರಲ್ಲಾಗಿ ಹೇಳಿರುತ್ತೇನೆ. ನನಗೆ ಇನ್ನೂ 15-20 ನಿಮಿಷಗಳ ಕಾಲಾವಕಾಶ ಬೇಕಾಗಿದೆ.....

Mr. SPEAKER.—Some other members also want to speak on this Bill.

The House will now rise and reassemble at 12-30 P.M. on Monday.

The House adjourned at Thirty Minutes past Twelve of the Clock to reassemble at Thirty Minutes past Twelve of the Clock on Monday, the 23rd September 1963.

WD 1195—GPB—900—10-12-63